ಸುದ್ದಿ ಸಿಂಚನ

ಉಪ್ಪಾರ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ಯಳಂದೂರು: ತಾಲೂಕು ಉಪ್ಪಾರ ಸೇನಾ ಸಮಿತಿಯಿಂದ ತಾಲೂಕು ಉಪ್ಪಾರರ ಸಂಯುಕ್ತಾಶ್ರಯದಲ್ಲಿ ಯಳಂದೂರು ಹಾಗೂ ಸಂತೆಮರಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಉಪ್ಪಾರ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಇದಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು ತಮ್ಮ ಸ್ವವಿವರಗಳ ಅರ್ಜಿಯನ್ನು ಎನ್. ಪ್ರದೀಪ್ 11ನೇ ವಾರ್ಡ್ ಬಿಸಿಎಂ ಹಾಸ್ಟೆಲ್ ಹತ್ತಿರ ಬಳೇಪೇಟೆ ಈ ವಿಳಾಸಕ್ಕೆ ಅಂಚೆ ಮೂಲಕ ಅಥವಾ ವೈಯುಕ್ತಿಕವಾಗಿ ತಲುಪಿಸಬಹುದಾಗಿದೆ. ಮಾಹಿತಿಗಾಗಿ 8951549479, 8553859289, 7026578195 ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು ಮೇ 18 ಅಂತಿಮ ದಿನವಾಗಿದೆ.

ಗೌಡಿಕೆ ಗುರುಸ್ವಾಮಪ್ಪ ನಿಧನ

ಚಾಮರಾಜನಗರ: ತಾಲೂಕಿನ ಹರವೆ ಗ್ರಾಮದ ನಿವಾಸಿ ಗೌಡಿಕೆ ಗುರುಸ್ವಾಮಪ್ಪ (95) ಅನಾರೋಗ್ಯದಿಂದ ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು. ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಸ್ವಗ್ರಾಮದ ತೋಟದ ಜಮೀನಿನಲ್ಲಿ ನೆರವೇರಿತು.

10ಕ್ಕೆ ತಾಯಂದಿರ ದಿನ

ಗುಂಡ್ಲುಪೇಟೆ: ಮದ್ದಾನೇಶ್ವರ ಚಾರಿಟೆಬಲ್ ಟ್ರಸ್ಟ್ ಹಾಗೂ ಮದ್ದಾನೇಶ್ವರ ಪಬ್ಲಿಕ್ ಶಾಲೆ ಮೇ 10ರಂದು ವಿಶ್ವ ತಾಯಂದಿರ ದಿನಾಚರಣೆ ಹಮ್ಮಿಕೊಂಡಿವೆ. ಪಟ್ಟಣದ ಮದ್ದಾನೇಶ್ವರ ಸಂಸ್ಥೆಯ ಶಾಲಾ ಆವರಣದಲ್ಲಿ ಮೇ 10ರ ಭಾನುವಾರ ಬೆಳಗ್ಗೆ 10ಕ್ಕೆ ನಡೆವ ದಿನಾಚರಣೆಯ ಸನ್ನಿಧಾನವನ್ನು ಪಡಗೂರು ಅಡವಿ ಮಠಾಧೀಶ ಶಿವಲಿಂಗೇಂದ್ರ ಮಹಾಸ್ವಾಮೀಜಿ ವಹಿಸಲಿದ್ದಾರೆ. ಮಾಜಿ ಸಚಿವೆ ಡಾ. ಗೀತಾ ಮಹದೇವ ಪ್ರಸಾದ್ ವಿಶ್ವ ತಾಯಂದಿರ ದಿನಾಚರಣೆ ಉದ್ಘಾಟಿಸಲಿದ್ದಾರೆ. ಸಮಾಜ ಸೇವಕಿ ಮಂಗಳ ಮುದ್ದುಮಾದಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮೈಸೂರು ಧ್ವನಿ ಫೌಂಡೇಶನ್ ಸಂಸ್ಥಾಪಕಿ ಡಾ. ಶ್ವೇತಾ ಮಡಪ್ಪಾಡಿ ಇರಲಿದ್ದಾರೆ.

ಭೋಗಾಪುರ ಕಾಲೇಜು ಸಮಾರೋಪ ಸಮಾರಂಭ

ಚಾಮರಾಜನಗರ: ಭೋಗಾಪುರದಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಾಂಸ್ಕೃತಿಕ, ಕ್ರೀಡೆ, ಎನ್‌ಎಸ್‌ಎಸ್, ರೆಡ್‌ಕ್ರಾಸ್, ರೇಂಜರ್ಸ್ ಮತ್ತು ರೋವರ್ಸ್ ಹಾಗೂ ವಿವಿಧ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಮೇ 8ರಂದು ಹಮ್ಮಿಕೊಳ್ಳಲಾಗಿದೆ.

ಗದ್ದೆ ಕೆಲಸದಲ್ಲಿದ್ದಾಗ ಕಾಡುಹಂದಿ ದಾಳಿ: ರೈತಗೆ ಗಾಯ

ರಾಮಪುರ ಸಮೀಪ ಮಂಚಪುರ ಗ್ರಾಮದಲ್ಲಿ ಘಟನೆ | ಗಾಯಾಳು ಮೈಸೂರಿಗೆ ವರ್ಗ

• **ಕನ್ನಡಪ್ರಭ ವಾರ್ತೆ** ಹನೂರು

ಬೆಳಗಿನ ಜಾವ ಹೊಲದಲ್ಲಿ ಕೆಲಸ ಮಾಡಲು ತೆರಳಿದ್ದ ರೈತನ ಮೇಲೆ ಕಾಡು ಹಂದಿಯೊಂದು ದಾಳಿ ನಡೆಸಿ ತೀವ್ರವಾಗಿ ಗಾಯಗೊಳಿಸಿರುವ ಘಟನೆಯೊಂದು ಹನೂರು ತಾಲೂಕಿನ ರಾಮಪುರ ಸಮೀಪದ ಮಂಚಪುರ ಗ್ರಾಮದಲ್ಲಿ ನಡೆದಿದೆ. ಘಟನೆ ಸಂಬಂಧ ಪಳನಿ ಎಂಬ ರೈತ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪಳನಿ ಅವರು ಗುರುವಾರ ಬೆಳಗಿನ ಜಾವ ಎಂದಿನಂತೆ ತಮ್ಮ ಹೊಲದಲ್ಲ ಕೆಲಸ ಮಾಡಲು ತೆರಳಿದ್ದರು. ಈ ವೇಳೆ ಅವರ ಮೇಲೆ ಹಂದಿ ತೀವ್ರವಾಗಿ ದಾಳಿ ನಡೆಸಿದೆ. ಪರಿಣಾಮ ಪಳನೀ ಚೀರಾಡಿದ್ದಾರೆ. ಇವರ ಚೀರಾಟವನ್ನು ಕೇಳಿದ ಸ್ಥಳೀಯರು, ತಕ್ಷಣ ಪಳನಿ ಅವರನ್ನು ಹೋಲಿ ಕ್ರಾಸ್ ಆಸ್ಪತ್ರೆಗೆ ದಾಖಲಿಸಿ ತುರ್ತು ಚಿಕಿತ್ಸೆ ಕೊಡಿಸಿದ್ದಾರೆ. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಆ್ಯಂಬುಲೆನ್ಸ್‌ನಲ್ಲಿ ವರ್ಗಾಯಿಸಿದ್ದಾರೆ.



ಅರಣ್ಯ ಇಲಾಖೆ ವಿರುದ್ಧ ಆಕ್ರೋಶ: ದಿನೇ ದಿನೇ ವನ್ಯಮೃಗಗಳ ಉಪಟಳ ಹೆಚ್ಚುತ್ತಿದ್ದರೂ, ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಕಾಡುಪ್ರಾಣಿಗಳಿಂದ ಜನ ಜಾನುವಾರುಗಳನ್ನು ರಕ್ಷಿಸಲು ಹಿಂದೇಟು ಹಾಕುತ್ತಿದ್ದಾರೆ ಎಂದು ಆರೋಪಿಸಿ, ಇಲಾಖೆ ವಿರುದ್ಧ ಕಿಡಿಕಾರಿದ್ದಾರೆ.



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಫಾರಿಗೆ ಸುತ್ತೂರು ಮಠಾಧೀಶ ಶಿವರಾತ್ರಿ ದೇಶೀಕೇಂದ್ರ ಮಹಾ ಸ್ವಾಮೀಜಿ, ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ಎಸ್. ನಂಜುಂಡ ಪ್ರಸಾದ್ ತೆರಳಿದರು.

ಕೊಳ್ಳೇಗಾಲದಾದ್ಯಂತ ಪೊಲೀಸ್ ದಾದಾಗಿರಿ: ಆರೋಪ

ದೂರು ಕೊಡಲು ಹೋದರೆ ಪೊಲೀಸರಿಂದ ಕಾಯಿಸುವಿಕೆ ಸಾಮಾನ್ಯ | ಮಹಿಳೆಯರ ರಕ್ಷಣೆಗೆ ಪೊಲೀಸರಿಗಿಲ್ಲ ಆಸಕ್ತಿ: ರೈತ ಸಂಘ ಬೇಸರ

• **ಕನ್ನಡಪ್ರಭ ವಾರ್ತೆ** ಕೊಳ್ಳೇಗಾಲ

ಕೊಳ್ಳೇಗಾಲ ನಮ್ಮ ಉಪವಿಭಾಗ ವ್ಯಾಪ್ತಿಯ ಕೆಲವು ಪೊಲೀಸ್ ಠಾಣೆಗಳಲ್ಲಿ ಬೇಜವಾಬ್ದಾರಿ ಅಧಿಕಾರಿಗಳಿಂದಾಗಿ ಸಾರ್ವಜನಿಕರಿಗೆ ಸಮರ್ಪಕವಾಗಿ ಕೆಲಸಗಳು ಆಗುತ್ತಿಲ್ಲ. ಅಮಾಯಕರ ಮೇಲೆ ಕೆಲ ಠಾಣೆಗಳಲ್ಲಿ ದಬ್ಬಾಳಿಕೆ ನಡೆಯುತ್ತಿದ್ದು, ದೂರು ನೀಡಿದರೂ ನ್ಯಾಯ ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ ಶಾಸಕರುಗಮನಹರಿಸಿನೊಂದವರಿಗೆನೆರವಾಗಬೇಕೆಂದು ರೈತ ಸಂಘದ ಜಿಲ್ಲಾ ಸಂಚಾಲಕ ಶೈಲೇಂದ್ರ ಆಗ್ರಹಿಸಿದರು.



ಕೊಳ್ಳೇಗಾಲದ ಪ್ರವಾಸಿ ಮಂದಿರದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಶೈಲೇಂದ್ರ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದಪ್ಪ ಚರ್ಮದ ಅಧಿಕಾರಿಗಳು ಠಾಣೆಗಳಿಗೆ ನ್ಯಾಯ ಕೇಳಲು ಬಂದ ಜನರಿಗೆ ಯಾವುದೇ ಬೆಲೆ, ಗೌರವ ಕೊಡುತ್ತಿಲ್ಲ. ಕೆಲವು ಠಾಣೆಗಳಲ್ಲಿನಾಗರಿಕರನ್ನುಕಾಯಿಸುತ್ತಿದ್ದಾರೆ. ಸಮಸ್ಯೆಯನ್ನು ಬಗೆಹರಿಸಿ ಕಳುಹಿಸುವಂಥ ಕೆಲಸ ಆಗುತ್ತಿಲ್ಲ ಎಂದು ದೂರಿದರು. ಈಗಾಗಲೇ ರಾಮಾಪುರ ಠಾಣೆಗೆ ಮಾರ್ಟಳ್ಳಿ ಕಿರಪಾತಿಯ ಮೋಕ್ಷರಾಣಿ ಎಂಬ ಮಹಿಳೆ ಮನೆಗೆ ಅತಿಕ್ರಮ ಪ್ರವೇಶ ಮಾಡಿ ಕೆಲವರು ನನ್ನನು ಹೊರ ಹಾಕಿದ್ದಾರೆಂದು ಕಳೆದ ಏ.16ರಂದು ದೂರು ಸಲ್ಲಿಸಿದರು ಇಲ್ಲಿಯವರೆಗೆ ಯಾವುದೇ ಕ್ರಮ ಜರುಗಿಸದೇ ಮಹಿಳೆಗೆ ರಕ್ಷಣೆ ನೀಡಿಲ್ಲ. ಮಹಿಳೆಗೆ ಅಪರಾಧ ಮಾಡುವಂತೆ ಉತ್ತೇಜಿಸಿರುವ ಇನ್ಸಪೆಕ್ಟರ್ ಚಿಕ್ಕರಾಜಶೆಟ್ಟಿ ಮೇಲೆ ಮೇಲಧಿಕಾರಿಗಳು ಕ್ರಮ ಜರುಗಿಸಬೇಕು. ಅವರ ಉದ್ಧಟ ವರ್ತನೆ, ಕರ್ತವ್ಯಲೋಪ ಇದಕ್ಕಿಂತ ಸಾಕ್ಷಿ ಬೇಕೆ ಎಂದರು.

ಗ್ರಾಮಾಂತರ ಪೊಲೀಸ್ ಠಾಣೆಯ ವ್ಯಾಪ್ತಿಯ ಮೊಳಗನಕಟ್ಟೆ ಗ್ರಾಮದ ತೋಟದ ಮನೆಯಲ್ಲಿ ವಿಜಯ ಲಲಿತಾ ಎಂಬುವರು ದೂರು ನೀಡಿದ್ದು, ಅವರು ನಮ್ಮ ಮನೆಯಲ್ಲಿ ಯಾರು ಇಲ್ಲದಿದ್ದಾಗ ಮೂವರು ಗಂಡಸರು ಮಾಸ್ಕ್ ಹಾಗೂ ಹೆಲ್ಮೆಟ್ ಧರಿಸಿ ಬಂದು ಖಾಲಿ ಪೇಪರ್‌ಗೆ ಹೆಬ್ಬೆಟ್ಟು ಹಾಕಿಸಿಕೊಂಡಿದ್ದಾರೆ. ಪೊಲೀಸರಿಗೆ ದೂರು ಕೊಡಲು ಹೋದರೇ ಗಾಂಜಾ ಕೇಸು ಹಾಕಿಸಬೇಕಾಗುತ್ತದೆ ಎಂದು ಧಮ್ಕಿ ಹಾಕಿದ್ದಾರೆ ಎಂದು ದೂರು ಸಲ್ಲಿಸಿದರೂ ಯಾವುದೇ ಕ್ರಮ ಆಗಿಲ್ಲ ಎಂದು ಆರೋಪಿಸಿದರು.

ಕೆಲವು ಠಾಣೆಗಳಲ್ಲಿ ಸಿಸಿ ಕ್ಯಾಮೆರಾಗಳಿಲ್ಲ. ಭ್ರಷ್ಟಾಚಾರಕ್ಕೆ ಆಸ್ಪದ ನೀಡುವ ಸಲುವಾಗಿ ಸಿಸಿ ಕ್ಯಾಮೆರಾ ಅಳವಡಿಸಿಲ್ಲ ಎಂಬ ಗಂಭೀರ ಆರೋಪಗಳಿವೆ. ಮಹಿಳೆಗೆ ಅನ್ಯಾಯ ಮಾಡುತ್ತಿರುವ ಚಿಕ್ಕರಾಜಶೆಟ್ಟಿ ವಿರುದ್ಧ ಮಹಿಳಾ ಆಯೋಗ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಗೃಹ ಸಚಿವರಿಗೂ ದೂರು ಸಲ್ಲಿಸಬೇಕಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಪೊಲೀಸ್ ಠಾಣೆಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಕುರಿತು ಕ್ರಮವಹಿಸಬೇಕು. ಕಾನೂನು ಪಾಲಿಸದ ಭ್ರಷ್ಟ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂಬಂಧ ಜಿಲ್ಲಾಡಳಿತ, ಉಸ್ತುವಾರಿ ಸಚಿವರು ಗಮನಹರಿಸಬೇಕು ಎಂದು ಮನವಿ ಮಾಡಿದರಲ್ಲದೆ ಕ್ರಮ ಕೈಗೊಳ್ಳದಿದ್ದಲ್ಲಿ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ವಾಣಿಜ್ಯ ಅಡುಗೆ ಅನಿಲ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ


• **ಕನ್ನಡಪ್ರಭ ವಾರ್ತೆ** ಗುಂಡ್ಲುಪೇಟೆ

ವಾಣಿಜ್ಯ ಹಾಗೂ ಗೃಹ ಬಳಕೆ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆ ಮತ್ತು ಕೊರತೆ ಖಂಡಿಸಿ ಪಟ್ಟಣದಲ್ಲಿ ಗುರುವಾರ ಬೇಗೂರು ಹಾಗೂ ಗುಂಡ್ಲುಪೇಟೆ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ರಸ್ತೆ ತಡೆ ನಡೆಸಿ ತಮ್ಮ ಆಕ್ರೋಶ ಹೊರ ಹಾಕಿದರು.



ಪಟ್ಟಣದ ಕಾಂಗ್ರೆಸ್ ಕಚೇರಿಯಿಂದ ಯುವ ಕಾಂಗ್ರೆಸ್ ಕಾರ್ಯಕರ್ತರು ಖಾಲಿ ಗ್ಯಾಸ್ ಸಿಲಿಂಡರ್ ಹಾಗೂ ಭಿತ್ತಿ ಪತ್ರಗಳ ಹಿಡಿದು ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗುತ್ತ ಪಟ್ಟಣದ ಮೈಸೂರು-ಊಟಿ ಹೆದ್ದಾರಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ಪಟ್ಟಣದ ಮಡಹಳ್ಳಿ ರಸ್ತೆ ವೃತ್ತದ ಬಳಿ ರಸ್ತೆತಡೆ ನಡೆಸಿದ ಪ್ರತಿಭಟನಾಕಾರರು ಕೇಂದ್ರ ಸರ್ಕಾರ ಹಾಗೂ ಬಿಜೆಪಿ ವಿರುದ್ಧ ಆಕ್ರೋಶ ಹೊರ ಹಾಕಿದರು.

ಪ್ರತಿಭಟನೆಯಲ್ಲಿ ಯುವ ಕಾಂಗ್ರೆಸ್ ಸಮಿತಿಯ ಆದರ್ಶ, ಮೋಹನ್ ದಾಸ್, ಅರುಣ್, ಮಾಡ್ರಹಳ್ಳಿ ಚಂದ್ರು, ಮಣಿ ಮಡಹಳ್ಳಿ, ಸುನೀಲ್, ಹಂಗಳ ರಾಜೇಶ್ ಇದ್ದರು.



ಬೇಕಾಗಿದ್ದಾರೆ
ಎಸ್.ಎಸ್.ಎಲ್.ಸಿ / ಪಿಯುಸಿ ವಿದ್ಯಾಭ್ಯಾಸ ಮಾಡಿರುವ ಯುವಕರು / ಯುವತಿಯರು ಪೆಟ್ರೋಲ್ ಬಂಕ್‌ನಲ್ಲಿ (ಮೈಸೂರು) ಕೆಲಸ ನಿರ್ವಹಿಸಲು ಬೇಕಾಗಿದ್ದಾರೆ
ಬೇಕಾಗುವ ತರಬೇತಿ ನೀಡಲಾಗುವುದು
ಆಸಕ್ತಿ ಇರುವವರು ಸಂಪರ್ಕಿಸಿ
96062 22435

ಮೈಸೂರು ವಿವಿ ಸಂಜೆ ಕಾಲೇಜಿಗೆ ಪ್ರವೇಶಾತಿ ಪ್ರಾರಂಭ

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನಲ್ಲಿ 2026-27ನೇ ಸಾಲಿಗೆ ಬಿಎ, ಬಿಕಾಂ ಮತ್ತು ಬಿಬಿಎ ಪದವಿ ಕೋರ್ಸ್ ಗಳಿಗೆ ಪ್ರವೇಶಾತಿ ಪ್ರಾರಂಭವಾಗಿದೆ. ದ್ವಿತೀಯ ಪಿಯುಸಿ ಹಾಗೂ ಐಟಿಐ ವಿದ್ಯಾರ್ಥಿಗಳು ಸ್ನಾತಕ ಪದವಿ ಪ್ರವೇಶಾತಿ ಪಡೆಯಲು ಹೆಚ್ಚಿನ ಮಾಹಿತಿಗೆ ವಿವಿ ಸಂಜೆ ಕಾಲೇಜು, ಮಾಹಾರಾಜ ಕಾಲೇಜು ಕ್ಯಾಂಪಸ್, ರಾಮಸ್ವಾಮಿ ವೃತ್ತದ ಹತ್ತಿರ, ಮೈಸೂರು ಇಲ್ಲಿಗೆ ಮಧ್ಯಾಹ್ನ 2.30 ರಿಂದ ರಾತ್ರಿ 9 ರವರೆಗೆ ಭೇಟಿ ನೀಡಬಹುದು ಅಥವಾ ಮೊ. 99166 41557, 99012 61106 ಸಂಪರ್ಕಿಸಬಹುದು ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ
ಭಾರತ ಸರ್ಕಾರ
(CIPET, CSTS, GOI), 437/ಎ, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೈಸೂರು-570 016
ಮತ್ತು ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
PMAJAY

ಪರಿಶಿಷ್ಟ ಜಾತಿಯ ನಿರುದ್ಯೋಗಿ ಅಭ್ಯರ್ಥಿಗಳಿಗೆ ಉಚಿತ ವೃತ್ತಿಪರ ತರಬೇತಿ

ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ PMAJAY ಯೋಜನೆಯಡಿ 2025-26ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ಮೈಸೂರಿನಲ್ಲಿರುವ ಭಾರತ ಸರ್ಕಾರದ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ತಂತ್ರಜ್ಞಾನ ಸಂಸ್ಥೆಯಲ್ಲಿ (CIPET) 3 ತಿಂಗಳ ಕೆಳಗೆ ಸೂಚಿಸಿದ ವೃತ್ತಿಪರ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ.

ತರಬೇತಿ ವಿವರ	ವಿದ್ಯಾರ್ಹತೆ
1. Assistant Machine Operator – Plastics Processing	• 10th or equivalent • 8th standard with 2 years of (NTC/ NAC) • 9th standard with 1.5 years relevant experience • 8th standard with 3 years relevant experience
2. Assistant Machine Operator – Injection Moulding	• 10th or equivalent • 8th standard with 2 years of (NTC/ NAC) • 9th standard with 1.5 years relevant experience • 8th standard with 3 years relevant experience

ಕಾರ್ಯಕ್ರಮದ ವಿಶೇಷತೆ
ಉಚಿತ ಊಟ ಹಾಗೂ ವಸತಿ, ಬೇಸಿಕ್ ಕಂಪ್ಯೂಟರ್ & ಸ್ಪೋಕನ್ ಇಂಗ್ಲೀಷ್ ತರಬೇತಿ, ತಿಂಗಳಿಗೆ ರೂ. 2,000/- ಶಿಷ್ಯ ವೇತನ ನೀಡಲಾಗುವುದು, ಉದ್ಯೋಗ ಅವಕಾಶಕ್ಕೆ ನೆರವು
ವಯೋಮಿತಿ: 18-35 ವರ್ಷ, ಆದಾಯ ಮಿತಿ: 2.50 ಲಕ್ಷಗಳು

ನೋಂದಣಿ ಪ್ರಕ್ರಿಯೆ ದಿನಾಂಕ 15-05-2026 ರಿಂದ CIPET ಸಂಸ್ಥೆಯಲ್ಲಿ ಆರಂಭವಾಗಲಿದ್ದು ಅರ್ಹ ಅಭ್ಯರ್ಥಿಗಳು ತಮ್ಮ ಮೂಲ ದಾಖಲಾತಿಗಳಾದ ವಿದ್ಯಾರ್ಹತೆ, ಡೇಟ್ ಆಫ್ ಬರ್ತ್ ಪ್ರೂಫ್, ಗುರುತಿನ/ ಐ ಡಿ ಪ್ರೂಫ್ (ಆಧಾರ್ ಕಾರ್ಡ್) ಇತ್ತೀಚಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ಒಂದು ಸೆಟ್ ಪ್ರತಿ, 6 ಪಾಸ್ ಪೋರ್ಟ್ ಅಳತೆಯ ಇತ್ತೀಚಿನ ಫೋಟೋಗಳೊಂದಿಗೆ ತರಬೇತಿಗೆ ನೊಂದಾಯಿಸಿಕೊಳ್ಳಲು ಸೂಚಿಸಲಾಗಿದೆ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
Mob: 94834 31966, 97391 96375, 97417 19645 Email: sstcmys1@gmail.com

ಸಾಹಿತ್ಯ-ಶಿಕ್ಷಣ-ಸಮಾಜ ಸೇವೆಯ ಸಮನ್ವಯ ಸಾಧಕ

ಪುತ್ತೂರು ಉಮೇಶ್ ನಾಯಕ್

ಪುತ್ತೂರು ಉಮೇಶ್ ನಾಯಕ್ ಅವರು ಸಾಹಿತ್ಯ, ಶಿಕ್ಷಣ ಹಾಗೂ ಸಮಾಜ ಸೇವಾ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಬಹುಮುಖ ವ್ಯಕ್ತಿತ್ವ. ಚಿಂತನೆ, ಕ್ರಿಯಾಶೀಲತೆ ಮತ್ತು ಮಾನವೀಯ ಸೇವಾಭಾವದ ಮೂಲಕ ಪುತ್ತೂರು ತಾಲೂಕು ಮಾತ್ರವಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ವಿಶಿಷ್ಟ ಗುರುತನ್ನು ನಿರ್ಮಿಸಿಕೊಂಡಿರುವ ಅವರು, ಸಮಾಜದ ವಿವಿಧ ಹಂತಗಳ ಮೇಲೆ ಸ್ಪಷ್ಟವಾದ ಸಕಾರಾತ್ಮಕ ಪ್ರಭಾವ ಬೀರಿರುವ ಸೇವಾ ಸಾಧಕರು.



ಪ್ರಸ್ತುತ ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಅವರು, ಕಳೆದ ನಾಲ್ಕು ವರ್ಷಗಳಿಂದ ತಾಲೂಕಿನ 32 ಗ್ರಾಮಗಳಲ್ಲಿ ಪ್ರತಿಮಾಸವೂ ಮಕ್ಕಳ ಸಾಹಿತ್ಯ ಸಮ್ಮೇಳನದ ಸ್ವರೂಪದ ಗ್ರಾಮ ಸಾಹಿತ್ಯ ಸಂಭ್ರಮ ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದಾರೆ. ಗ್ರಾಮ ಸಾಹಿತ್ಯ ಸಂಭ್ರಮದಲ್ಲಿ ವಿದ್ಯಾರ್ಥಿ ಕವಿ ಗೋಷ್ಠಿ ಜೊತೆಗೆ ವಿನೂತನ ಪ್ರಯೋಗಗಳಾದ ಬಾಲಕಥಾಗೋಷ್ಠಿ, ಪ್ರವಾಸ ಕಥನ ಲೇಖನ, ನನ್ನ ಆಪ್ತಮಿತ್ರ ಲೇಖನ, ನನ್ನ ನೆಚ್ಚಿನ ಶಿಕ್ಷಕ ಲೇಖನ ಗೋಷ್ಠಿಗಳನ್ನು ಅಳವಡಿಸಿಕೊಂಡು ಯುವ ಜನತೆಯನ್ನು ಸಾಹಿತ್ಯ ಕ್ಷೇತ್ರದತ್ತ ಬರಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. 250ಕ್ಕೂ ಹೆಚ್ಚು ವಿವಿಧ ಕ್ಷೇತ್ರಗಳ ಸಾಧಕರನ್ನು ಗ್ರಾಮ ಮಟ್ಟದಲ್ಲಿ ಗುರುತಿಸಿ ಗೌರವಿಸಿದ್ದಾರೆ. 100ಕ್ಕೂ ಅಧಿಕ ಹೊಸ ಕೃತಿಗಳ ಪ್ರಕಟಣೆಗೆ ಮಾರ್ಗದರ್ಶನ ನೀಡಿ ಉದಯೋನ್ಮುಖ ಸಾಹಿತಿಗಳಿಗೆ ಬೆಂಬಲ ನೀಡಿದ್ದಾರೆ.

ಪುತ್ತೂರು ತಾಲೂಕಿನಲ್ಲಿ ಸುಮಾರು 20 ವರ್ಷಗಳಿಂದ ನಿಂತುಹೋದ ಕರ್ನಾಟಕ ರಾಜ್ಯೋತ್ಸವದ ಕನ್ನಡ ಭುವನೇಶ್ವರಿಯ ಭವ್ಯ ಮೆರವಣಿಗೆಯನ್ನು ಪುತ್ತೂರಿನ ಶಾಸಕರಾದ ಅಶೋಕ್ ರೈ ಯವರ ಮಾರ್ಗದರ್ಶನದಲ್ಲಿ ಸುಮಾರು 50ಕ್ಕೂ ಹೆಚ್ಚು ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಪುನರಾರಂಭಿಸಿ, ರಾಜ್ಯೋತ್ಸವದ ಅಂಗವಾಗಿ ನಡೆಯುವ ಸನ್ಮಾನವನ್ನು ತಾಲೂಕು ರಾಜ್ಯೋತ್ಸವ ಪ್ರಶಸ್ತಿ ಸ್ವರೂಪಕ್ಕೆ ತಂದ ಪ್ರಮುಖ ವ್ಯಕ್ತಿ. ಜಿಲ್ಲೆಯಲ್ಲಿ ತಾಲೂಕು ಮಟ್ಟದಲ್ಲಿ ರಾಜ್ಯೋತ್ಸವ ಪ್ರಶಸ್ತಿ ವ್ಯವಸ್ಥಿತವಾಗಿ ನಡೆಯುತ್ತಿರುವುದು ಪುತ್ತೂರಿನಲ್ಲಿ ಮಾತ್ರ ಎನ್ನುವುದು ಗಮನಾರ್ಹ.



ಕನ್ನಡಪ್ರಭ ಮತ್ತು ಸುವರ್ಣ ನ್ಯೂಸ್ ವತಿಯಿಂದ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ 'ಸುವರ್ಣ ಕನ್ನಡಿಗ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕನ್ನಡದಲ್ಲೂ ಐಎಎಸ್ ಬರೆಯಿರಿ' ಅಭಿಯಾನ

ಶಿಕ್ಷಣ ಕ್ಷೇತ್ರದಲ್ಲಿ ಇವರ ಕೊಡುಗೆ ವಿಶೇಷವಾಗಿದೆ. ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸ್ಪರ್ಧಾತ್ಮಕ ಭವಿಷ್ಯವನ್ನು ಗಮನದಲ್ಲಿರಿಸಿ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಐಎಎಸ್ ಅಧಿಕಾರಿಗಳಾಗಬೇಕೆಂಬ ಮಹಾದಾಸೆಯಿಂದ ಕನ್ನಡದಲ್ಲೂ ಐಎಎಸ್ ಪರೀಕ್ಷೆ ಬರೆಯಿರಿ ಎಂಬ ಅಭಿಯಾನವನ್ನು ಆರಂಭಿಸಿ, 200ಕ್ಕೂ ಅಧಿಕ ಐಎಎಸ್- ಐಪಿಎಸ್ ಹಾಗೂ ತತ್ಸಮಾನ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಮಾಹಿತಿ ಕಾರ್ಯಗಾರಗಳನ್ನು ಕನ್ನಡದಲ್ಲೇ ನಡೆಸಿ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಅರಿವನ್ನುಂಟು ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಗ್ರಾಮಮಟ್ಟದಲ್ಲಿ ಸಾಹಿತ್ಯ ಸಂಭ್ರಮ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಜಾಗೃತಿ ಕಾರ್ಯಕ್ರಮಗಳನ್ನು ಸಂಯೋಜಿತವಾಗಿ ನಡೆಸಿರುವುದು ರಾಜ್ಯದ ಕನ್ನಡ ಸಾಹಿತ್ಯ ಪರಿಷತ್ತು ಇತಿಹಾಸದಲ್ಲೇ ವಿನೂತನ ಪ್ರಯತ್ನವಾಗಿದೆ.

ಸಾಹಿತ್ಯ ಕ್ಷೇತ್ರದಲ್ಲಿ ಅವರು ಸಾಧಕ ಲೇಖಕರಾಗಿಯೂ ಗುರುತಿಸಿಕೊಂಡಿದ್ದಾರೆ. ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಸಂಕ್ಷಿಪ್ತ ಸ್ಥಳಪುರಾಣವಾದ ಸ್ವಯಂಭೂ ಮಹಾಲಿಂಗೇಶ್ವರ ಕೃತಿಯನ್ನು ರಚಿಸಿದ್ದು, ಈ ಕೃತಿ ಧಾರ್ಮಿಕ ದತ್ತಿ ಇಲಾಖೆಯಿಂದ ಪ್ರಕಟವಾಗಿದೆ. ಇದಲ್ಲದೆ ಇನ್ನೂ ಮೂರು ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ.

ನಿರ್ಗತಿಕರ ಪುನರ್ವಸತಿ ಸೇವೆ: ಪುತ್ತೂರು ಉಮೇಶ್ ನಾಯಕ್ ಅವರ ಸೇವಾ ಬದುಕಿನ ಅತ್ಯಂತ ಸ್ಪರ್ಶಕ ಅಧ್ಯಾಯವೆಂದರೆ ನಿರ್ಗತಿಕರು, ಭಿಕ್ಷುಕರು ಮತ್ತು ಅನಾಥರ ಪುನರ್ವಸತಿ ಕಾರ್ಯ. ಕಳೆದ ಹತ್ತು ವರ್ಷಗಳಲ್ಲಿ 100ಕ್ಕೂ ಅಧಿಕ ನಿರ್ಗತಿಕರನ್ನು ಪುನರ್ವಸತಿ ಕೇಂದ್ರಗಳಿಗೆ ಸೇರಿಸಿ ಸಮಾಜದ ಮುಖ್ಯವಾಹಿನಿಗೆ ತರುವ ಸಂಕಲ್ಪದೊಂದಿಗೆ ಅವರಿಗೆ ಹೊಸ ಬದುಕಿನ ಆಶಾಕಿರಣ ನೀಡಿದ್ದಾರೆ. ವಿಶೇಷವಾಗಿ ಎಚ್‌ಐವಿ ಪೀಡಿತ ಓರ್ವ ಮಹಿಳೆ ಹಾಗೂ ಇಬ್ಬರು ಮಕ್ಕಳನ್ನು ರಕ್ಷಿಸಿ, ಅವರಿಗೆ ವೈದ್ಯಕೀಯ ನೆರವು, ಆಶ್ರಯ ಮತ್ತು ವಿದ್ಯಾಭ್ಯಾಸದ ವ್ಯವಸ್ಥೆ ಕಲ್ಪಿಸಿರುವುದು ಇವರ ಮಾನವೀಯತೆಯ ಮಾದರಿಯಾಗಿದೆ.

ಗೌರವಗಳು :
ಇವರ ಸಾಹಿತ್ಯಿಕ, ಶೈಕ್ಷಣಿಕ ಹಾಗೂ ಸಮಾಜಮುಖಿ ಸೇವೆಗಳನ್ನು ಗುರುತಿಸಿ 2020ರಲ್ಲಿ ರೋಟರಿ ಅನ್ಸಂಗ್ ಹೀರೋ ಪ್ರಶಸ್ತಿ ಹಾಗೂ 2025ರಲ್ಲಿ ಪುತ್ತೂರು ತಾಲೂಕು ಗಣರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇತ್ತೀಚೆಗೆ ಕನ್ನಡಪ್ರಭ ಏಷಿಯಾನೆಟ್ ಸುವರ್ಣನ್ಯೂಸ್‌ನ ಸುವರ್ಣ ಕನ್ನಡಿಗ' ಪ್ರಶಸ್ತಿಗೆ ಭಾಜನರಾಗಿದ್ದು, ಇವರ ಸಮಾಜಸೇವೆಗೆ ದೊರೆತ ಮುಕುಟವಾಗಿದೆ.

ತಮ್ಮ ಒಡಹುಟ್ಟಿದ ಡೌನ್ ಸಿಂಡ್ರೋಮ್ ಸಹೋದರ ಸುರೇಶ್ ನಾಯಕ್ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವಲ್ಲಿ ಹಾಗೂ ಅವರಿಗೆ ಜಾದೂ ಪ್ರದರ್ಶನ ಕಲಿಸಿ ಅವರ ಪ್ರತಿಭೆಯನ್ನು ಪ್ರಪಂಚಕ್ಕೆ ತೋರಿಸಿಕೊಟ್ಟಿದ್ದಾರೆ. ಅವರು ದೇಶದಾದ್ಯಂತ ಇದುವರೆಗೆ 500ಕ್ಕೂ ಅಧಿಕ ಉಚಿತ ಪ್ರದರ್ಶನಗಳ ಮೂಲಕ ಬುದ್ಧಿಮಾಂದ್ಯತಾ ಜನಜಾಗೃತಿಯನ್ನು ಮೂಡಿಸಿದ್ದಾರೆ. ಉಡುಪಿಯ ಡೌನ್ ಸಿಂಡ್ರೋಮ್ ಈಜುಗಾರ್ತಿ ಅರ್ಚನಾ ಜೈ ವಿಠ್ಠಲ್, ಮೈಸೂರಿನ ದಿವ್ಯಾಂಗ ಕೀ ಬೋರ್ಡ್ ಕಲಾವಿದ ಶ್ರೀ ಗಣೇಶ್ ಭಟ್ ಹಾಗೂ ಡೌನ್ ಸಿಂಡ್ರೋಮ್ ಜಾದೂಗಾರ ಸುರೇಶ ನಾಯಕ್ ಇವರಿಗೆ ವಿಶ್ವ ಅಂಗವಿಕಲ ದಿನಾಚರಣೆಯ ರಾಷ್ಟ್ರಪತಿಗಳ ರಾಷ್ಟ್ರ ಪ್ರಶಸ್ತಿ ದೊರಕುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

ಪ್ರಸ್ತುತ ಅವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನಲ್ಲಿ ಶ್ರೀರಾಮ್ ಶೇರ್ಸ್ ಅಂಡ್ ಫೈನಾನ್ಷಿಯಲ್ ಕನ್ಸಲ್ಟೆಂಟ್ ಎಂಬ ಸಂಸ್ಥೆಯ ಆಡಳಿತ ನಿರ್ದೇಶಕರಾಗಿದ್ದು, ಈ ಸಂಸ್ಥೆಯ ಮೂಲಕ ಶೇರು ಉದ್ಯಮವನ್ನು ನಡೆಸುತ್ತಿದ್ದಾರೆ. ಪತ್ನಿ ರೂಪಶ್ರೀ ನಾಯಕ್, ಪುತ್ರ ಸಾತ್ವಿಕ್ ನಾಯಕ್ ಹಾಗೂ ಸಹೋದರ ಸುರೇಶ್ ನಾಯಕ್ ಹಾಗೂ ಪೋಷಕರೊಂದಿಗೆ ಪುತ್ತೂರಿನಲ್ಲಿ ವಾಸವಾಗಿದ್ದಾರೆ (ದೂರವಾಣಿ: 9844401295).

ಪಂಜಾಬ್ ನ್ಯಾಷನಲ್ ಬ್ಯಾಂಕ್ ...ಭರೋಸೆ ಕಾ ಪ್ರತೀಕ್ ! punjab national bank ...the name you can BANK upon !
ಬೆಂಗಳೂರು ವೃತ್ತ ಕಛೇರಿ : 1ನೇ ಮಹಡಿ, ರಹೇಜಾ ಟವರ್, ನಂ.26-27, ಎಂ ಜಿ ರಸ್ತೆ, ಬೆಂಗಳೂರು-560001. ಇಮೇಲ್: cobangeastgad@pnb.co.in

ಸ್ಥಳಾವಕಾಶ ಬೇಕಾಗಿದೆ

ಪಂಜಾಬ್ ನ್ಯಾಷನಲ್ ಬ್ಯಾಂಕ್ ಇವರಿಗೆ ಈ ಕೆಳಕಂಡ ಸ್ಥಳಗಳಲ್ಲಿ ಶಾಖೆ ತೆರೆಯಲು ಜೊತೆಗೆ ಎಟಿಎಂ ಗಾಗಿ ಕಾರ್ಪೆಟ್ ಪ್ರದೇಶ ಹೊಂದಿರುವ ಸೂಕ್ತವಾದ ಮತ್ತು ಉತ್ತಮವಾಗಿ ನಿರ್ಮಿಸಲಾದ ಸಭಾಂಗಣ ಮಾದರಿಯ ಕಟ್ಟಡ ಗುತ್ತಿಗೆ/ ಬಾಡಿಗೆ ಆಧಾರದಲ್ಲಿ ಅಗತ್ಯವಿದೆ. ಸದರಿ ಸ್ಥಳವು ನೆಲಮಹಡಿಯಲ್ಲಿರಬೇಕು. ಮೊದಲನೇ ಮಹಡಿಯಲ್ಲಿದ್ದರೆ ಲಿಫ್ಟ್ ಹೊಂದಿರಬೇಕಾಗಿರುತ್ತದೆ.

ಕ್ರ.ಸಂ.	ಸ್ಥಳ	ಕಾರ್ಪೆಟ್ ಪ್ರದೇಶ (ಚದರ ಅಡಿಗಳಲ್ಲಿ)
1.	ಹೆಬ್ಬಾಳ 1ನೇ ಹಂತ, ಮೈಸೂರು	1200 – 1600
2.	ಹುಣಸೂರು (ಟಿಎಂಸಿ)	1200 – 1600

ನೀಡಲಾಗುವ ಆವರಣಗಳು ಶಾಸನಬದ್ಧ ಅಧಿಕಾರಿಗಳಿಂದ ಎಲ್ಲಾ ಕ್ಲಿಯರೆನ್ಸ್ ಪ್ರಮಾಣಪತ್ರಗಳನ್ನು ಹೊಂದಿರಬೇಕು. ಆಸಕ್ತ ಮಾಲೀಕರು / ನೋಂದಾಯಿತ ಪವರ್ ಆಫ್ ಅಟಾರ್ನಿ ಹೊಂದಿರುವವರು, ಅಂತಹ ಸ್ಥಳಗಳನ್ನು ದೀರ್ಘಾವಧಿಯ ಗುತ್ತಿಗೆ ಆಧಾರದ ಮೇಲೆ 15 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ನೀಡಲು ಸಿದ್ಧರಿದ್ದರೆ, ಬ್ಯಾಂಕಿನ ವೆಬ್‌ಸೈಟ್ www.pnb.bank.in ನಲ್ಲಿ ಲಭ್ಯವಿರುವ ನಿಗದಿತ ಸ್ವರೂಪದಲ್ಲಿ ತಮ್ಮ ಕೊಡುಗೆಗಳನ್ನು ಕಳುಹಿಸಬಹುದು ಅಥವಾ ಅದನ್ನು ಮೇಲಿನ ವಿಳಾಸದಿಂದ ಕಚೇರಿ ಸಮಯದಲ್ಲಿ ಪಡೆಯಬಹುದು. ಸಂಪೂರ್ಣ ಪ್ರಸ್ತಾವನೆಯನ್ನು ಸರಿಯಾಗಿ ಮೊಹರು ಮಾಡಿ ಸಹಿ ಮಾಡಿ (30.05.2026 ರಂದು ಸಂಜೆ 5:00 ಗಂಟೆ ಅಥವಾ ಅದಕ್ಕೂ ಮೊದಲು) ಮೇಲಿನ ವಿಳಾಸದಲ್ಲಿ ಕೆಳಗೆ ಸಹಿ ಮಾಡಿದವರನ್ನು ತಲುಪಬೇಕು.
ಬ್ಯಾಂಕ್ ಯಾವುದೇ ದಲ್ಲಾಳಿ ಅನ್ನು ಪಾವತಿಸುವುದಿಲ್ಲ. ಯಾವುದೇ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಪ್ರಸ್ತಾವನೆಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಕಾಯ್ದಿರಿಸಿಕೊಂಡಿದೆ.
ಸ್ಥಳ : ಬೆಂಗಳೂರು, ದಿನಾಂಕ : 08.05.2026 ಸರ್ಕಲ್ ಹೆಡ್ । ಬೆಂಗಳೂರು ಸರ್ಕಲ್

ಮೈಸೂರು ಅಭಿವೃದ್ಧಿ ಪ್ರಾಧಿಕಾರ,
ಜೆ.ಎಲ್.ಬಿ. ರಸ್ತೆ, ಮೈಸೂರು
ಸಂಖ್ಯೆ:ಮೈಅಪ್ರಾ/ವಿ.ತ-04/ಪಿಆರ್-80/2026-27 ದಿನಾಂಕ: 06.05.2026

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಸ್ತ ಮಂಡಳಿ, ಮೈಸೂರು ವತಿಯಿಂದ ಲೆಡ್ಜರ್ ನಮೂದು ಮತ್ತು ಮುಚ್ಚಳಿಕೆ ಪತ್ರದಂತೆ ಗೋಕುಲಂ ರಸ್ತೆ, ವಾಣಿವಿಲಾಸ ಪುರಂ, 3ನೇ "ಎ" ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ:84ರ ಅಳತೆ:160*100.1/2 ಅಡಿ ನಿವೇಶನವು ಶ್ರೀ.ಎ.ಅಣ್ಣಾಮಲೈ ಮೊದಲಿಯಾರ್ ರವರಿಗೆ ಮಂಜೂರಾಗಿರುವ ವಿವರವಿದ್ದು, ನಂತರ ಸದರಿ ನಿವೇಶನವನ್ನು 84, 84/ಎ, ಎಂಬುದಾಗಿ ವಿಭಾಗವಾಗಿದ್ದು, ಶ್ರೀ.ಎ.ಗಣಪತಿಮೊದಲಿಯಾರ್ ಬಿನ್ ಶ್ರೀ.ಎ.ಅಣ್ಣಾಮಲೈ ಮೊದಲಿಯಾರ್ ರವರಿಗೆ ದಿ:02.01.1956ರಂದು ನೊಂದಾಯಿತ ವಿಲ್ ಮೂಲಕ ನೀಡಿರುತ್ತಾರೆ. ತದನಂತರ ಶ್ರೀಮತಿ ಸ್ವರ್ಣಾಂಭ ಮತ್ತು ಶ್ರೀಮತಿ.ಗೌರಮ್ಮ ರವರು ಜಂಟಿಯಾಗಿ 160*101ಅಡಿ ಅಳತೆಗೆ ದಿ:15.03.1961ರಂದು ನೊಂದಾಯಿತ ಕ್ರಯಪತ್ರದ ಮೂಲಕ ಪಡೆದಿರುತ್ತಾರೆ.
ಶ್ರೀಮತಿ.ಗೌರಮ್ಮರವರಿಗೆ ನಿವೇಶನ ಸಂಖ್ಯೆ:84, ಅಳತೆ:50.1/4*160ಅಡಿ ಅಳತೆಗೆ ದಿ:03.05.1961ರಂದು ಮುಚ್ಚಳಿಕೆ ಪತ್ರ ನೀಡಲಾಗಿರುತ್ತದೆ.
ಶ್ರೀಮತಿ.ಸ್ವರ್ಣಾಂಭರವರಿಗೆ ನಿವೇಶನ ಸಂಖ್ಯೆ:84/ಎ, ಅಳತೆ:50.1/4*160ಅಡಿ ಅಳತೆಗೆ ದಿ:03.05.1961ರಂದು ಮುಚ್ಚಳಿಕೆ ಪತ್ರ ನೀಡಲಾಗಿರುತ್ತದೆ.
ಶ್ರೀಮತಿ.ಸ್ವರ್ಣಾಂಭರವರಿಗೆ ನಿವೇಶನ ಸಂಖ್ಯೆ:84/ಎ, ಅಳತೆ:50.1/4*160ಅಡಿ ಅಳತೆಗೆ ದಿ:03.05.1961ರಂದು ಮುಚ್ಚಳಿಕೆ ಪತ್ರದಂತೆ ಬಂದಿದ್ದು, ಇವರು ಇವರ ಮೊದಲನೇ ಮಗಳು ಶ್ರೀಮತಿ ಭ್ರಮರಾಂಭರವರ ಒಬ್ಬನೇ ಮಗನಾದ ಶ್ರೀ.ಟಿ.ಸಿ.ಮಹೇಶ್‌ಚಂದ್ರ ರವರಿಗೆ ದಿ:29.08.1986ರಂದು ನೊಂದಾಯಿತ ವಿಲ್ ಮುಖಾಂತರ ನೀಡಿರುತ್ತಾರೆ.
ಶ್ರೀಮತಿ ಸ್ವರ್ಣಾಂಭ ರವರು ದಿ:05.08.1997ರಂದು ಮೃತರಾಗಿರುವ ಮರಣ ಪ್ರಮಾಣ ಪತ್ರ ಹಾಗು ಸದರಿ ನಿವೇಶನದ ದಾಖಲೆಗಳು ಮತ್ತು ಇ-ಸ್ವತ್ತಿನೊಂದಿಗೆ ಸದರಿ ನಿವೇಶನದ ವರ್ಗಾವಣೆ ಮತ್ತು ಕ್ರಯಪತ್ರ ಕೋರಿರುತ್ತಾರೆ. ಅದರಂತೆ ವಿಶೇಷ ರಾಜಸ್ವ ನಿರೀಕ್ಷಕರವರಿಂದ ಸ್ಥಳ ಮಹಜರ್ ಮತ್ತು ಹೇಳಿಕೆ ವರದಿ ಪಡೆಯಲಾಗಿರುತ್ತದೆ.
ಆದುದರಿಂದ ಶ್ರೀ.ಟಿ.ಸಿ.ಮಹೇಶ್‌ಚಂದ್ರ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ವಾಣಿವಿಲಾಸ ಪುರಂ, 3ನೇ "ಎ" ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ:84/ಎ, ಅಳತೆ:50.1/4*160ಅಡಿ ನಿವೇಶನವನ್ನು ವಿಲ್ ಮತ್ತು ಪೌತಿ ರೀತ್ಯಾ ವರ್ಗಾವಣೆ ಮಾಡಿ ಕ್ರಯಪತ್ರ ನೀಡುವಂತೆ ಕೋರಿರುವುದರಿಂದ. ಅದರಂತೆ ಮೇಲ್ಕಂಡ ನಿವೇಶನಕ್ಕೆ ವರ್ಗಾವಣೆ ಮತ್ತು ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/- ವಿಶೇಷ ತಹಸೀಲ್ದಾರ್
ವಲಯ ಕಛೇರಿ-04,
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

SURYODAY A BANK OF SMILES
ಸೂರ್ಯೋದಯ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್
ನೋಂದಾಯಿತ ಮತ್ತು ಕಾರ್ಪ್ ಕಛೇರಿ: 1101, ಶಾರದ ಟೆರಸೆಸ್, ಪ್ಲಾಟ್ ಸಂ. 65
ಸೆಕ್ಟರ್-11, ಸಿಬಿಡಿ ಬೆಲಾಪುರ್, ನವಿ ಮುಂಬೈ- 400614. CIN:L65923MH2008PLC261472

ಸ್ವಾಧೀನ ಸೂಚನೆ

ಆದಾಗ್ಯೂ, ಸೂರ್ಯೋದಯ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ.,ನ ಅಧಿಕೃತ ಅಧಿಕಾರಿ, ಸೆಕ್ಯುರಿಟೈಸೇಶನ್ ಮತ್ತು ಹಣಕಾಸು ಆಸ್ತಿಗಳ ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯಿದೆ ಜಾರಿ ಕಾಯ್ದೆ, 2002 ರ ಅಡಿಯಲ್ಲಿ ಮತ್ತು ಸೆಕ್ಯುರಿಟಿ ಬಡ್ಡಿ (ಜಾರಿ) ನಿಯಮಗಳು 2002 ರ ನಿಯಮ 3 ರೊಂದಿಗೆ ಓದಲಾದ ಸೆಕ್ಷನ್ 13(2) ರ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ಸಾಲಗಾರರು/ಸಹ-ಸಾಲಗಾರರು/ರುಗಳಿಗೆ ಡಿಮಾಂಡ್ ನೋಟಿಸ್‌ಗಳನ್ನು ನೀಡಿರುವುದರಿಂದ, ಸಾಲಗಾರರು ಆಯಾ ಹೆಸರಿನ ವಿರುದ್ಧ ಉಲ್ಲೇಖಿಸಲಾದ ಮೊತ್ತವನ್ನು ಮರುಪಾವತಿಸಲು ಸಾಲಗಾರರನ್ನು ಕೋರಲಾಗಿದೆ. ಡಿಮಂಡ್ ನೋಟೀಸ್ ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಗಳಲ್ಲಿ ಉಲ್ಲೇಖಿಸಿದಂತೆ ಅನ್ವಯವಾಗುವ ದರಗಳಲ್ಲಿ ಬಡ್ಡಿಯೊಂದಿಗೆ, ಅನ್ವಯವಾಗುವ ಭವಿಷ್ಯದ ಬಡ್ಡಿಯೊಂದಿಗೆ, ಪಾವತಿ ಮತ್ತು/ಅಥವಾ ಗಳಿಕೆಯ ದಿನಾಂಕದವರೆಗೆ ಉಂಟಾದ ಪ್ರಾಸಂಗಿಕ ವೆಚ್ಚಗಳು, ವೆಚ್ಚ, ಶುಲ್ಕಗಳು ಇತ್ಯಾದಿ ಸೇರಿದಂತೆ.

ಸಾಲದ ಸಂ. ಸಾಲಗಾರರ/ ಸಹ- ಸಾಲಗಾರರ/ ಜಾಮೀನುದಾರರ ಹೆಸರು	ಡಿಮಾಂಡ್ ನೋಟೀಸ್ ದಿನಾಂಕ	30.01.2026
237000000395, 1) ಶ್ರೀ ಕಾರ್ತಿಕ್ ನಾಯಕ, ಕೃಷ್ಣಾ ನಾಯಕ ರವರ ಮಗ, 2. ಶ್ರೀ ಮಹೇಂದ್ರ ನಾಯಕ, ಕೃಷ್ಣಾ ನಾಯಕ ರವರ ಮಗ, 3) ಶ್ರೀಮತಿ ಯಶೋಧಮ್ಮ, ಕೃಷ್ಣಾ ನಾಯಕ ರವರ ಪತ್ನಿ, 4) ಶ್ರೀ ಕೃಷ್ಣಾ ನಾಯಕ, ಮರಿ ನಾಯಕ ರವರ ಮಗ.	ದಿನಾಂಕ/ಸಮಯ ಮತ್ತು ಸ್ವಾಧೀನತೆ ವಿಧ	04/05/2026; ಸಂ. 04:27 ಮತ್ತು ಸಾಂಕೇತಿಕ
	ಒಟ್ಟಾರೆ ಬಾಕಿ ಮೊತ್ತ ಮೊತ್ತ ರೂ.	ರೂ. 3,19,648.00/- 13.01.2026 ರಂದು ಇದ್ದಂತೆ

ಆಸ್ತಿಯ ವಿವರ: ಸಕಲ ಸಮಸ್ತವೂ ಸೇರಿದಂತೆ ಆಸ್ತಿ ಸಂ. 150/1, ಯುನಿಕ್ಯು ಪಿಐಡಿ ಸಂ. 150800104000120197, ಜ್ಯೋತಿಗೌಡನಪುರ ಗ್ರಾಮ ಮತ್ತು ಗ್ರಾಮಪಂಚಾಯಿತಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ಪಿಎನ್- 571117 ಮತ್ತು ಚಕ್ಕುಬಂದಿ ಈ ರೀತಿ ಇದೆ: ಪೂರ್ವಕ್ಕೆ: ಕಾಲು ದಾರಿ, ಪಶ್ಚಿಮಕ್ಕೆ: ಸಾಕಮ್ಮ ರವರ ಮನೆ, ಉತ್ತರಕ್ಕೆ: ಮಾರಪ್ಪ ನಾಯಕ ರವರ ಮನೆ, ದಕ್ಷಿಣಕ್ಕೆ: ನಂಜುಂಡನಾಯಕ ರವರ ಮನೆ.

ದಿನಾಂಕ: 08.05.2026,
ಸ್ಥಳ: ಚಾಮರಾಜನಗರ
ಅಧಿಕೃತ ಅಧಿಕಾರಿ,
ಸೂರ್ಯೋದಯ್ ಸ್ಮಾಲ್ ಫೈನಾನ್ಸ್ ಬಾಯಂಕ್ ಲಿಮಿಟೆಡ್

ಕನ್ನಡಪ್ರಭ
ಶುಕ್ರವಾರ 8.05.2026

ಗರಿಷ್ಠ 32°C | ಕನಿಷ್ಠ 22°C

ಸುದ್ದಿ ಸಿಂಚನ

ವ್ಯಸನ ಮುಕ್ತ ಕೇಂದ್ರಕ್ಕೆ ಡೀಸಿ ಶ್ರೀರೂಪಾ ಭೇಟಿ

ಚಾಮರಾಜನಗರ: ಜಿಲ್ಲಾಧಿಕಾರಿ ಶ್ರೀರೂಪಾ ಅವರು ಬುಧವಾರ ಚಾಮರಾಜನಗರ ಪಟ್ಟಣದಲ್ಲಿರುವ ಸ್ಪಂದನ ವ್ಯಸನ ಮುಕ್ತ (ಡಿ-ಅಡಿಕ್ಷನ್) ಕೇಂದ್ರಕ್ಕೆ ಭೇಟಿ ನೀಡಿ ಚಟುವಟಿಕೆಗಳನ್ನು ಪರಿಶೀಲಿಸಿದರು. ಕೇಂದ್ರದಲ್ಲಿದ್ದ ಶಿಬಿರಾರ್ಥಿಗಳೊಂದಿಗೆ ಸಂವಾದ ನಡೆಸಿದ ಜಿಲ್ಲಾಧಿಕಾರಿಗಳು ಮದ್ಯಪಾನದಿಂದ ದೂರವಿದ್ದು, ಆರೋಗ್ಯಕರ ಜೀವನ ನಡೆಸುವಂತೆ ಸಲಹೆ ನೀಡಿದರು. ಚಿಕಿತ್ಸೆ ಪೂರ್ಣಗೊಂಡ ಬಳಿಕ ತಮ್ಮ ಗ್ರಾಮಗಳಲ್ಲಿ ಇತರರಿಗೂ ಮದ್ಯ ವ್ಯಸನ ತ್ಯಜಿಸಲು ಪ್ರೇರಣೆ ನೀಡುವಂತೆ ಕರೆ ನೀಡಿದರು. ಪ್ರಸ್ತುತ ಕೇಂದ್ರದಲ್ಲಿ 12 ಮಂದಿ ವ್ಯಸನ ಮುಕ್ತಿಗಾಗಿ ಚಿಕಿತ್ಸೆ ಪಡೆಯುತ್ತಿದ್ದು, ಈ ಸಂದರ್ಭದಲ್ಲಿ ಕೇಂದ್ರದ ದಾಖಲೆಗಳನ್ನು ಪರಿಶೀಲಿಸಿ ಚಿಕಿತ್ಸಾ ಹಾಗೂ ಪುನರ್ವಸತಿ ಕಾರ್ಯಗಳ ಕುರಿತು ಜಿಲ್ಲಾಧಿಕಾರಿಯವರು ಮಾಹಿತಿ ಪಡೆದುಕೊಂಡರು. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ.ಪಿ. ಚಂದ್ರಶೇಖರ್, ಆರೋಗ್ಯ ಸಿಬ್ಬಂದಿ ಭಾಗ್ಯ ಇತರರು ಇದ್ದರು.

ತೆರಕಣಾಂಬಿ ಜೆಎಸ್ಎಸ್ ಅನಾಥಾಲಯಕ್ಕೆ ಅರ್ಜಿ

ಗುಂಡ್ಲುಪೇಟೆ: ತಾಲೂಕಿನ ತೆರಕಣಾಂಬಿ ಗ್ರಾಮದ ಜೆಎಸ್ಎಸ್ ಅನಾಥಾಲಯಕ್ಕೆ ಅರ್ಜಿ ಆಹ್ವಾನಿಲಾಗಿದೆ. 5ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ಅರ್ಜಿಯನ್ನು ನೇರವಾಗಿ ಪಡೆಯಬಹುದು ಅಥವಾ ಮೊಬೈಲ್‌ನಲ್ಲಿ ಸಂಪರ್ಕಿಸಿದರೆ ವಾಟ್ಸಾಪ್ ಮೂಲಕ ಕಳುಹಿಸಿ ಕೊಡಲಾಗುತ್ತದೆ. ಪ್ರವೇಶಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಜೆಎಸ್ಎಸ್ ಮಹಾವಿದ್ಯಾಪೀಠದ ಹಾಸ್ಟೆಲ್ ವಿಭಾಗ(0821-2548212) ಅಥವಾ ನಿಲಯ ಪಾಲಕ ಅಶೋಕ್ (9731051019) ಸಂಪರ್ಕಿಸಲು ಜೆಎಸ್ಎಸ್ ಮಹಾ ವಿದ್ಯಾಪೀಠದ ಕಾರ್ಯದರ್ಶಿ-2 ಎಸ್. ಶಿವಕುಮಾರ ಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಡ್ಡಗೆರೆ ಬಸವೇಶ್ವರ ಅನಾಥಾಲಯಕ್ಕೆ ಪ್ರವೇಶ

ಗುಂಡ್ಲುಪೇಟೆ: ತಾಲೂಕಿನ ವಡ್ಡಗೆರೆ ಗ್ರಾಮದ ಬಸವೇಶ್ವರ ಅನಾಥಾಲಯಕ್ಕೆ ಜೆಎಸ್ಎಸ್ ಮಹಾ ವಿದ್ಯಾಪೀಠ ಅರ್ಜಿ ಆಹ್ವಾನಿಸಲಾಗಿದೆ. 5ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ಅರ್ಜಿಯನ್ನು ನೇರವಾಗಿ ಪಡೆಯಬಹುದು ಅಥವಾ ಮೊಬೈಲ್‌ನಲ್ಲಿ ಸಂಪರ್ಕಿಸಿದರೆ ವಾಟ್ಸಾಪ್ ಮೂಲಕ ಕಳುಹಿಸಿ ಕೊಡಲಾಗುತ್ತದೆ. ಪ್ರವೇಶಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಜೆಎಸ್ಎಸ್ ಮಹಾವಿದ್ಯಾಪೀಠದ ಹಾಸ್ಟೆಲ್ ವಿಭಾಗ (0821-2548212) ಅಥವಾ ನಿಲಯ ಪಾಲಕ ಮಹಾಂತದೇವರು (6360256679) ಸಂಪರ್ಕಿಸಲು ಜೆಎಸ್ಎಸ್ ಮಹಾ ವಿದ್ಯಾಪೀಠದ ಕಾರ್ಯದರ್ಶಿ-2 ಎಸ್. ಶಿವಕುಮಾರ ಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಟಿಟಿಸಿ, ಐಟಿಐ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ಗುಂಡ್ಲುಪೇಟೆ: ಪಟ್ಟಣದ ಬಳಿಯ ದುಂದಾಸನಪುರ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿಟಿಟಿಸಿ) 2026-27ನೇ ಸಾಲಿನ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಾತಿ ಆರಂಭಗೊಂಡಿದ್ದು, ಎಸ್ಎಸ್ಎಲ್‌ಸಿ, ಪಿಯುಸಿ, ಐಟಿಐ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ತರಬೇತಿ ಕೇಂದ್ರದಲ್ಲಿ ಡಿಟಿಡಿಎಂ, ಡಿಇಇಇ ಮತ್ತು ಡಿಎಂಸಿಎಚ್ ಮೂರು ಕೋರ್ಸ್‌ಗಳು ಲಭ್ಯವಿದ್ದು, 3+1 ಕಡ್ಡಾಯ ಕೈಗಾರಿಕೆ ತರಬೇತಿಯನ್ನು ಒಳಗೊಂಡಿರುವ ಈ ಕೋರ್ಸ್‌ಗಳು ಶೇ.100ರಷ್ಟು ಉದ್ಯೋಗ ಭರವಸೆಯನ್ನು ಹೊಂದಿದೆ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ವಸತಿನಿಲಯದ ಸೌಲಭ್ಯವಿದೆ. ಆಸಕ್ತ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರನ್ನು (9945479700, 9945349638) ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಪ್ರಸರಣ ವಿಭಾಗ
ಕನ್ನಡಪ್ರಭ ಪತ್ರಿಕೆ ಬಂದಿಲ್ಲವೆ, ತಡವಾಗಿ ಬರುತ್ತಿದೆಯೆ, ಪತ್ರಿಕೆ ನಿಮ್ಮ ಮನೆಗೆ ಹಾಕಿಸಿಕೊಳ್ಳಬೇಕೆ ಸಂಪರ್ಕಿಸಿ:
ಶ್ರೀಧರ್.ಡಿ: 9980335540
ರಾಘವೇಂದ್ರ.ಬಿ:9686925077
CONNECT



ಜಿಲ್ಲಾಧಿಕಾರಿ ಶ್ರೀರೂಪಾ ಅವರು ಬುಧವಾರ ಚಾಮರಾಜನಗರ ಪಟ್ಟಣದಲ್ಲಿರುವ ಸ್ಪಂದನ ವ್ಯಸನ ಮುಕ್ತ (ಡಿ-ಅಡಿಕ್ಷನ್) ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ಪರಿಶೀಲಿಸಿದರು. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ.ಪಿ. ಚಂದ್ರಶೇಖರ್, ಭಾಗ್ಯ ಇತರರು ಇದ್ದರು.



ತಮಿಳುನಾಡಿನ ವಿಧಾನಸಭೆ ಚುನಾವಣೆಯಲ್ಲಿ ನಟ ವಿಜಯ್ ಅವರ ತಮಿಳಗ ವೇಟ್ರಿ ಕಳಗಂ (ಟಿವಿಕೆ) ಸರ್ಕಾರ ರಚನೆ ಸಿದ್ಧತೆ ನಡೆಸುತ್ತಿರುವುದಕ್ಕಾಗಿ ಅಭಿಮಾನಿಗಳು ಸಂಭ್ರಮಿಸಿದರು. ಹನೂರಿನ ಗಡಿ ಭಾಗದ ನಾಗಮಲೆ, ಕೂಡ್ಲೂರು ಮತ್ತು ಗೋಪಿನಾಥಂ ಸೇರಿದಂತೆ ಇತರೆಡೆ ಅಭಿಮಾನಿಗಳು ಖುಷಿಪಟ್ಟರು.

ತಮಿಳ್ನಾಡು ಸಿಎಂ ಪಟ್ಟದತ್ತ ವಿಜಯ್: ಹರ್ಷೋತ್ಸವ

• **ಕನ್ನಡಪ್ರಭ ವಾರ್ತೆ** ಹನೂರು

ತಮಿಳುನಾಡು ವಿಧಾನಸಭೆಯಲ್ಲಿ ಅಭೂತಪೂರ್ವ ಜಯಗಳಿಸಿ ಮುಖ್ಯಮಂತ್ರಿ ಅಲಂಕರಿಸಲು ಸಿದ್ಧತೆ ನಡೆಸುತ್ತಿರುವ ಚಿತ್ರನಟ ವಿಜಯ್ ಅವರ ಅಭಿಮಾನಿಗಳು ಹನೂರು ತಾಲೂಕಿನ ಗಡಿ ಭಾಗದ ಗ್ರಾಮಗಳಲ್ಲಿ ಸಂಭ್ರಮಾಚರಿಸಿದರು.

ತಮಿಳಗ ವೇಟ್ರಿ ಕಳಗಂ (ಟಿವಿಕೆ)ಯಿಂದ 107 ಸಂಖ್ಯಾಬಲ ಪಡೆದಿರುವ ವಿಜಯ್ ಅವರು ಸರ್ಕಾರ ರಚನೆಗೆ ರಾಜ್ಯಪಾಲರಿಗೆ ಮನವಿ ಸಲ್ಲಿಸಿರುವ ಹೊತ್ತಿನಲ್ಲಿಯೇ ತಮಿಳುನಾಡು-ಕರ್ನಾಟಕ ಗಡಿ ಭಾಗದಲ್ಲಿನ ನಾಗಮಲೆ, ಗೋಪಿನಾಥಂ, ಕೂಡ್ಲೂರು ಸೇರಿ ಹಲವು ಗ್ರಾಮಗಳಲ್ಲಿನ ಯುವಕರು ಆನಂದಪಟ್ಟಿದ್ದಾರೆ. ಪಟಾಕಿ ಸಿಡಿಸಿ, ಸಿಹಿ ತಿನಿಸಿ, ವಿಜಯ್ ಅವರ ರಾಜಕೀಯ ಪ್ರವೇಶವನ್ನು ಬೆಂಬಲಿಸಿದ್ದಾರೆ.

ಗಡಿಭಾಗದ ಗ್ರಾಮಗಳಲ್ಲಿ ಯುವಕರಲ್ಲಿ ಟಿವಿಕೆ ಪಕ್ಷದತ್ತ ಆಕರ್ಷಣೆ ಹೆಚ್ಚುತ್ತಿರುವುದು ಗಮನಾರ್ಹವಾಗಿದೆ. ವಿಜಯ್ ಅವರು ಜನಪರ ನಾಯಕತ್ವ ನೀಡುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಅಭಿಮಾನಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಕಾಡಾನೆ ದಾಳಿ ತಡೆಗೆ ಭೂವಿಜ್ಞಾನ ಇಲಾಖೆ ಅಡ್ಡಿ

ಸಲಗ ದಾಳಿ ತಡೆಗೆ ಕಂದಕ ತೆಗೆಯಲು ಅಡ್ಡಗಾಲು | ಎನ್‌ಓಸಿ ಕೊಡಲು ಮೀನಮೇಷ | ಕಲ್ಲು ಸಿಡಿಸುವ ಕುರಿತು ಅನುಮತಿಗೆ ವಿಘ್ನ

• **ರಂಗೂಪುರ ಶಿವಕುಮಾರ್**

ಕನ್ನಡಪ್ರಭ ವಾರ್ತೆ ಗುಂಡ್ಲುಪೇಟೆ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕುಂದಕೆರೆ ವಲಯದ ಗಡಿ ಭಾಗದಲ್ಲಿ ಕಾಡಾನೆಗಳು ಹಾವಳಿ ತಡೆಗಟ್ಟಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಅಡ್ಡಗಾಲು ಹಾಕುತ್ತಿದೆ. ಆನೆ ತಡೆ ಕಂದಕ ನಿರ್ಮಿಸಲು ಗಟ್ಟಿ ಕಲ್ಲು ಬಂದ ಹಿನ್ನಲೆ ಕಲ್ಲುಗಳಿರುವ ಸ್ಥಳ ಪರಿಶೀಲಿಸಿ, ಸ್ಟೋನ್ ಬ್ಲಾಸ್ಟಿಂಗ್‌ಗೆ ನಿರಾಕ್ಷೇಪಣ ಪತ್ರ (ಎನ್‌ಒಸಿ) ನೀಡಲು ಇಲಾಖೆ ಮೀನಮೇಷ ಎಣಿಸುತ್ತಿದೆ. 7 ದಿನಗಳೊಗೆ ಸ್ಪಷ್ಟ ಅಭಿಪ್ರಾಯ ಮತ್ತು ವರದಿ ನೀಡಬೇಕೆಂಬ ಜಿಲ್ಲಾಧಿಕಾರಿಗಳ ಆದೇಶವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಲ್ಲಂಘಿಸಿದೆ. ಜ.22ರಂದೇ ಜಿಲ್ಲಾಧಿಕಾರಿ ಕಾರ್ಯಾಲಯ ಪತ್ರ ಬರೆದಿದ್ದರೂ ಸ್ಪಂದಿಸಿಲ್ಲ. ಹೀಗಾದಲ್ಲಿ ಇನ್ನು ಜನರು ಕೊಟ್ಟ ಮನವಿಗೆ ಯಾವ ರೀತಿಯಲ್ಲಿ ಉತ್ತರ ಬರಲಿದೆ ಎಂದು ಜನರು ಪ್ರಶ್ನಿಸಿದ್ದಾರೆ.

ಕುಂದಕೆರೆ ವಲಯದಲ್ಲಿ ಕಾಡಾನೆಗಳು ಫಸಲು ನಾಶಗೊಳಿಸಿದ್ದಕ್ಕೆ ರೈತರು ತತ್ತರಿಸಿದ್ದಾರೆ. ಈ ಬಗ್ಗೆ ರೈತ ಸಂಘಟನೆಗಳು ಅರಣ್ಯ ಇಲಾಖೆಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಏನಿದು ಸಮಸ್ಯೆ? ಕಾಡಾನೆಗಳ ನಿಯಂತ್ರಣಕ್ಕೆ ಸರ್ಕಾರ ಅನುದಾನ ಬಿಡುಗಡೆ ಮಾಡಿದ್ದು,



ನಿರ್ಮಾಣ ಹಂತದಲ್ಲಿರುವ ಗುಂಡ್ಲುಪೇಟೆಯ ಕುಂದುಕೆರೆ ಕಂದಕದ ದೃಶ್ಯ.

ಈಗಾಗಲೇ ಟೆಂಡರ್ ಆಗಿ, ಗುತ್ತಿಗೆದಾರರೊಬ್ಬರು ಕೆಲಸ ಆರಂಭಿಸಿದ್ದಾರೆ. ತಾಲೂಕಿನ ಬಾಚಹಳ್ಳಿ ಗ್ರಾಮದ ಡೊಂಕಿದಾರಿಯಿಂದ ಬಿದ್ದ ಕಲ್ಲಾರೆ ತನಕ 2 ಕಿ.ಮೀ., ಬಿದ್ದ ಕಲ್ಲಾರೆಯಿಂದ ಹೊನ್ನೆ ಮರದ ತಿಟ್ಟು ತನಕ 1.230 ಕಿ.ಮೀ. ತನಕ ಕೆಲವೊಂದು ಭಾಗಗಳಲ್ಲಿ ಗಟ್ಟಿ ಕಲ್ಲುಗಳಿವೆ.

ಡಿಸಿಗೆ ಸಿಎಫ್ ಪತ್ರ: ಕಂದಕ ಕಾಮಗಾರಿಯಲ್ಲಿ ಗಟ್ಟಿ ಕಲ್ಲುಗಳನ್ನು ಸ್ಫೋಟಿಸಿ ತೆಗೆಯಲು ಅನುಮತಿ ನೀಡುವಂತೆ ಜ.14ರಂದು ಜಿಲ್ಲಾಧಿಕಾರಿಗಳಿಗೆ ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ಮನವಿ ಮಾಡಿದ್ದರು.

ಎಡಿಸಿಯಿಂದಲೂ ಪತ್ರ: ಬಂಡೀಪುರ ಸಿಎಫ್ ಪತ್ರ ಬಳಿಕ ಅಪರ ಜಿಲ್ಲಾಧಿಕಾರಿಯವರು ಜ.22ರಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಿರಿಯ ಭೂವಿಜ್ಞಾನಿ, ಪರಿಸರ ಅಧಿಕಾರಿ ಹಾಗೂ ತಹಸೀಲ್ದಾರ್‌ಗೆ ಗಟ್ಟಿ ಕಲ್ಲು ತೆಗೆಯಲು ನಿರಾಕೇಕ್ಷಣಾ ಪತ್ರ (ಎನ್‌ಒಸಿ) ಕುರಿತು, 7 ದಿನದೊಳಗೆ ಅಭಿಪ್ರಾಯ ಕೋರಿದ್ದರು.


4 ಇಲಾಖೆಯಿಂದ ಎನ್‌ಓಸಿ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ, ಪರಿಸರ ಅಧಿಕಾರಿ ಹಾಗೂ ತಹಸೀಲ್ದಾರ್ ನಿರಾಕ್ಷೇಪಣ ಪತ್ರ ಕೊಟ್ಟಿದ್ದಾರೆ. ಆದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮಾತ್ರ ಕುಂದಕೆರೆ ವಲಯದಲ್ಲಿ ಪರಿಶೀಲನೆ ನಡೆಸಿಲ್ಲ.

ಅರಣ್ಯ ಇಲಾಖೆಯನ್ನು ಸಂಪರ್ಕಿಸಿಲ್ಲ: ರಾಜೇಶ್

ಗುಂಡ್ಲುಪೇಟೆ: ಗಟ್ಟಿ ಕಲ್ಲು ಸಿಕ್ಕಿರುವ ಬಗ್ಗೆ ಅರಣ್ಯ ಇಲಾಖೆ ನಮ್ಮನ್ನು ಸಂಪರ್ಕಿಸಿಲ್ಲ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಿರಿಯ ಭೂ ವಿಜ್ಞಾನಿ ರಾಜೇಶ್ ಹೇಳಿದ್ದಾರೆ. 'ಕನ್ನಡಪ್ರಭ'ದೊಂದಿಗೆ ಮಾತನಾಡಿ, ಗಟ್ಟಿ ಕಲ್ಲು ಸಿಕ್ಕ ಸ್ಥಳ ಅರಣ್ಯ ಇಲಾಖೆ ತೋರಿಸಿಲ್ಲ. ಅರಣ್ಯ ಇಲಾಖೆಯವರು ಬಂದು ಕಿರಿಯ ಭೂ ವಿಜ್ಞಾನಿ ಕರೆದುಕೊಂಡು ಹೋಗಿಲ್ಲ. ನನಗೂ ತಿಳಿಸಿಲ್ಲ ಎಂದು ಹೇಳಿದ್ದಾರೆ.

ಇಂದು ಕೆಡಿಪಿ ಸಭೆ

ಚಾಮರಾಜನಗರ: ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅಧ್ಯಕ್ಷತೆಯಲ್ಲಿ ಮೇ 8ರ ಬೆಳಿಗ್ಗೆ 10.30ಕ್ಕೆ ಜಿಲ್ಲಾಡಳಿತ ಭವನದದಲ್ಲಿ ಕೆಡಿಪಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿಲ್ಲಾ ಪಂಚಾಯ್ತಿ ಸಿಇಓ ತಿಳಿಸಿದ್ದಾರೆ.



ಕುಂದುಕೆರೆ ಕಂದಕ ಸಂಬಂಧ ವಿವಿಧ ಇಲಾಖೆ ಅನುಮತಿ ಕೋರಿರುವ ಪತ್ರ

ಡಿ-ಗ್ರೂಪ್ ನೌಕರಗೆ ಶೌಚಾಲಯ ತೊಳೆಯುವಂತೆ ಅವಾಜ್: ಇಒ ಗುರುಶಾಂತಪ್ಪಗೆ ಕಡ್ಡಾಯ ರಜೆ

ಸಂಘಟನೆಗಳ ಹೋರಾಟಕ್ಕೆ ಅಂತು ಮಣಿದ ಜಿಲ್ಲಾಡಳಿತ



ಕೊಳ್ಳೇಗಾಲ ತಾಪಂಗೆ ಪ್ರಭಾರಿ ಇಓ ಆಗಿ ಜಿಪಂ ಎಂಜಿನಿಯರ್ ಕುಮಾರ್ ಅಧಿಕಾರ ಸ್ವೀಕರಿಸಿದರು.

• **ಕನ್ನಡಪ್ರಭ ವಾರ್ತೆ** ಕೊಳ್ಳೇಗಾಲ

ಪ್ರಗತಿಪರ, ದಲಿತರ ಸಂಘಟನೆಗಳ ಪ್ರತಿಭಟನೆಗೆ ಮಣಿದಿರುವ ಜಿಲ್ಲಾ ಪಂಚಾಯ್ತಿ ಅಧಿಕಾರಿಗಳು ತಾಲೂಕು ಪಂಚಾಯ್ತಿ ಇಓ ಗುರುಶಾಂತಪ್ಪ ಬೆಳ್ಳುಂಡಗಿ ಅವರನ್ನು ಮೇ 7ರಿಂದ ಕಡ್ಡಾಯ ರಜೆ ಮೇಲೆ ತೆರಳಲು ಆದೇಶಿಸಿದ್ದಾರೆ.

ಬುಧವಾರ ದಲಿತ ಹಾಗೂ ಪ್ರಗತಿಪರ ಸಂಘಟನೆಗಳು ಇಓ ವಿರುದ್ಧ ಉಗ್ರ ಪ್ರತಿಭಟನೆ ಮಾಡಿ ಜಿಲ್ಲಾ ಪಂಚಾಯ್ತಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಅಮಾನತ್ತಿಗೆ ಮನವಿ ಸಲ್ಲಿಸಲಾಗಿತ್ತು. ಪಂಚಾಯ್ತಿ ಡಿ-ಗ್ರೂಪ್ ನೌಕರರಿಗೆ ಕಿರುಕುಳ ನೀಡುತ್ತಿದ್ದಾರೆ. ಶೌಚಾಲಯ ತೊಳೆಯುವಂತೆ ಬೆದರಿಕೆ ಹಾಕುತ್ತಿದ್ದಾರೆ. ಈ ಹಿನ್ನೆಲೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಮಂಗಳವಾರ ಪ್ರತಿಭಟನೆ ನಡೆಸಿದ ಹಿನ್ನೆಲೆ ಗುರುವಾರ ಜಿಪಂನ ಸಿಇಓ ಮೋನಾ ರೋತ್ ಅವರು ಇಓ ಅವರ ಸ್ಥಾನಕ್ಕೆ ಜಿಪಂನ ಎಂಜಿನಿಯರ್ ಕುಮಾರ್ ಅವರಿಗೆ ಪ್ರಭಾರ ಅಧಿಕಾರ ವಹಿಸಿ ವೈಯುಕ್ತಿಕ ಕಾರಣಗಳಿಗಾಗಿ ರಜೆ ತೆರಳಲು ಆದೇಶಿಸಿದ್ದಾರೆ. ಈ ಹಿನ್ನೆಲೆ ಗುರುವಾರ ಸಂಜೆ ಕುಮಾರ್ ಅಧಿಕಾರ ವಹಿಸಿಕೊಂಡರು.

ಇಓ ವಿರುದ್ಧ ಠಾಣೆಗೆ ದೂರು: ಏತನ್ಮಧ್ಯೆ ಹೊಸ ಹಂಪಾಪುರ ಗ್ರಾಮದ ಮಧು ನಾಯಕ ಎಂಬುವರು ಮೇ 6ರಂದು ಬೆಳಗ್ಗೆ 10.24ರಲ್ಲಿ ತಾಪಂ ಇಓ ಅವರು ಕಡ್ಡಾಯ ರಜೆ ಮೇಲಿದ್ದರೂ ಕಚೇರಿಯಲ್ಲಿ ಕುಳಿತಿದ್ದರು. ನಾನು ಕೆಲಸ ನಿಮಿತ್ತ ಕಚೇರಿಗೆ ಹೋಗಿ ವಿಡಿಯೋ ಮಾಡಲು ಫೋನ್ ತೆಗೆಯುತ್ತಿದ್ದಂತೆ ಫೋನ್ ಕಿತ್ತುಕೊಂಡು, ನನ್ನನ್ನು ಅವ್ಯಾಚ್ಯ ಪದಗಳಿಂದ ನಿಂದಿಸಿದ್ದಾರೆ. ಕೊಲೆ ಬೆದರಿಕೆ ಹಾಕಿದ್ದಾರೆಂದು ಪಟ್ಟಣ ಪೊಲೀಸ್ ಠಾಣೆಗೆ ಲಿಖಿತ ದೂರು ನೀಡಿದ್ದಾರೆ.

ನನ್ನ ವರ್ಚಸ್ಸಿಗೆ ಧಕ್ಕೆ ತರಲು ಬಿಜೆಪಿ ನಾಯಕರಿಂದ ಟೀಕೆ: ಶಾಸಕ ಗಣೇಶ್

ಹಾರ, ಶಾಲು ಹಾಕಿಸಿಕೊಂಡರೆ ಅಭಿವೃದ್ಧಿಯಾಗದು: ವಿಪಕ್ಷಗಳಿಗೆ ಚಾಟಿ

• **ಕನ್ನಡಪ್ರಭ ವಾರ್ತೆ** ಗುಂಡ್ಲುಪೇಟೆ

ಯಾರು ಏನೇ ಹೇಳಿದರೂ ಗುಂಡ್ಲುಪೇಟೆ ಅಭಿವೃದ್ಧಿ ದೃಷ್ಟಿಯಿಂದ ಸಾಕಷ್ಟು ಬೆಳವಣಿಗೆಯಾಗಿದೆ. ವಿಪಕ್ಷವರು ಏನೇ ಟೀಕೆ ಮಾಡಿದರೂ ನನ್ನ ವಯಕ್ತಿಕ ವರ್ಚಸ್ಸಿಗೆ ಧಕ್ಕೆ ತರುವ ಉದ್ದೇಶವಿದೆ ಎಂದು ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ವಿಪಕ್ಷಗಳ ವಿರುದ್ಧ ಹರಿಹಾಯ್ದರು.

ತಾಲೂಕಿನ ಕುಂದಕೆರೆ ಗ್ರಾಮದಲ್ಲಿ ₹2.5 ಕೋಟಿ ವೆಚ್ಚದಲ್ಲಿ ವಡ್ಡಗೆರೆ-ಕುಂದಕೆರೆ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಭೂಮಿ ಪೂಜೆ ನಡೆಸಿ ಬಳಿಕ ಮಾತನಾಡಿದರು.

ಅಭಿವೃದ್ಧಿ ದೃಷ್ಟಿಯಿಂದ ಕೆಲಸ ಮಾಡಬೇಕು. ಸುಮ್ಮನೇ ಕಾರ್ಯಕ್ರಮಗಳನ್ನು ಮಾಡಿಕೊಂಡು, ಊಟ ಮಾಡಿಕೊಂಡು, ಶಾಮಿಯಾನ ಹಾಕಿಸಿಕೊಂಡು, ಭಾಷಣ ಮಾಡುವುದರಿಂಧ ಜನರಿಗೆ ಉಪಯೋಗವಿಲ್ಲ.ಇದನ್ನುಜನಅರ್ಥಮಾಡಿಕೊಳ್ಳಬೇಕು ಎಂದರು.

ಶಾಸಕರ ಅವಧಿ ಇನ್ನು 2 ವರ್ಷವಿದೆ. ಆದ್ಯತೆ ಮೇರೆಗೆ ಕೆಲಸ ಮಾಡುತ್ತೇನೆ. ಮುಖ್ಯವಾಗಿರುವ ಕೆಲಸ ಹೇಳಿ ಮಾಡಿಸಿಕೊಡೋಣ. ಹಣವಿಲ್ಲದೆ ಗುದ್ದಲಿ ಪೂಜೆ ಮಾಡೋದಿಲ್ಲ. ಹಣ ಬಂದರೆ ಮಾತ್ರ ಗುದ್ದಲಿ ಪೂಜೆ ಮಾಡುತ್ತೇನೆ ಎಂದರು.

ಭಾಷಣ ಮಾಡಿ ಶಾಲು ಹಾಕಿಸಿಕೊಂಡರೆ ಯಾವ ಅಭಿವೃದ್ಧಿಯೂ ಆಗುವುದಿಲ್ಲ. ಕೆಲಸ ಆಗಬೇಕು. ಜನರಿಗೆ ಅನುಕೂಲವಾಗಬೇಕು ಎಂಬುದು ಉದ್ದೇಶ ಎಂದು ಹೇಳಿದರು.

5 ಕೋಟಿಗೂ ಹೆಚ್ಚು ಕಾಮಗಾರಿಗೆ ಚಾಲನೆ: ನಾನು ಮೇ 9ರಿಂದ ಕ್ಷೇತ್ರದಲ್ಲಿ 15 ದಿನ ಇರದ ಕಾರಣ ಈಗಾಗಲೇ ಮಂಜೂರಾದ ಕಾಮಗಾರಿಗಳು ನಿಲ್ಲಬಾರದು. ಚಾಲನೆ ಸಿಗಲಿ ಎಂದು ಗುರುವಾರ ಒಂದೇ ದಿನ ಲೋಕೋಪಯೋಗಿ ಇಲಾಖೆ ಹಾಗೂ ಕೆಆರ್‌ಐಡಿಐಎಲ್‌ನಿಂದ ಸುಮಾರು 5 ಕೋಟಿಗೂ ಹೆಚ್ಚು ಕಾಮಗಾರಿಗೆ ಚಾಲನೆ ನೀಡಿದ್ದೇನೆ ಎಂದರು.

ಶಾಸಕ ಗಣೇಶ್ ಪ್ರಸಾದ್ ಅವರು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವ ಸಂದರ್ಭದಲ್ಲಿ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ಎಸ್. ನಂಜುಂಡ ಪ್ರಸಾದ್, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪಿ.ಬಿ. ರಾಜಶೇಖರ್, ಎಪಿಎಂಸಿ ಅಧ್ಯಕ್ಷ ಆರ್. ಎಸ್. ನಾಗರಾಜು, ಕುಂದಕೆರೆ ಗ್ರಾಮಸ್ಥರು ಇದ್ದರು.



ಗುಂಡ್ಲುಪೇಟೆ ತಾಲೂಕಿನ ಕುಂದಕೆರೆಯಲ್ಲಿ ₹2.5 ಕೋಟಿ ವೆಚ್ಚದ ರಸ್ತೆ, ಚರಂಡಿ ಕಾಮಗಾರಿಗೆ ಭೂಮಿ ಪೂಜೆ ಬಳಿಕ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಮಾತನಾಡಿದರು.

ದುರವಸ್ಥೆ | ಸಾರ್ವಜನಿಕ ಸೇವೆಗೆ ಸಿಬ್ಬಂದಿ, ಅಧಿಕಾರಿಗಳ ಅಸಡ್ಡೆ | ಇ-ಸ್ವತ್ತು, ಎನ್‌ಓಸಿ ವಿತರಿಸಲು 'ನಾಳೆ ಬಾ' ನೀತಿ | ಜನರ ಪರದಾಟ

ಹನೂರು ಪಪಂನಲ್ಲಿ ಕೆಲಸವಾಗಲು ಜನ ಚಪ್ಪಲಿ ಸವೆಸಬೇಕು!

• **ಜಿ. ದೇವರಾಜು ನಾಯ್ಡು**

ಕನ್ನಡಪ್ರಭ ವಾರ್ತೆ ಹನೂರು

ಜನಪ್ರತಿನಿಧಿಗಳು ಮತ್ತು ಹಿರಿಯ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಹನೂರು ಪಟ್ಟಣ ಪಂಚಾಯ್ತಿ ಕಚೇರಿಯಲ್ಲಿ ಸಾರ್ವಜನಿಕರು ಕೆಲಸ ಕಾರ್ಯಗಳಿಗೆ ದಿನನಿತ್ಯ ಪರದಾಡುವಂತಾಗಿದೆ.

ಹನೂರು ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ 13 ವಾರ್ಡ್‌ಗಳಲ್ಲಿ 15,000 ಜನಸಂಖ್ಯೆಯಿದೆ. ಪಂಚಾಯ್ತಿ ಸಿಬ್ಬಂದಿ ಸರಿಯಾಗಿ ಕಾರ್ಯನಿರ್ವಹಿಸಿದಪರಿಣಾಮ ಜನಸಾಮಾನ್ಯರು ಸಮಸ್ಯೆ ಅನುಭವಿಸಬೇಕಾಗಿದೆ. ಪಪಂ ಸಿಬ್ಬಂದಿಗೆ ಹೇಳುವವರು-ಕೇಳುವವರಿಲ್ಲದೇ ಆಡಿದ್ದೇ ಆಟವೆಂಬಂಥ ಪರಿಸ್ಥಿತಿ ನಿರ್ಮಾಣವಾಗಿದೆ.

ಊಟದ ಸಮಯಕ್ಕೆ ಹಾಜರ್: ಪಟ್ಟಣ ಪಂಚಾಯ್ತಿಯಲ್ಲಿ ಕೆಲ ನೌಕರರು 12 ಗಂಟೆಗೆ ಕೆಲಸಕ್ಕೆ ಹಾಜರಾಗಿ 12 ಗಂಟೆ ಬಳಿಕ ಪೌರ ಕಾರ್ಮಿಕರಿಗೆ ಹಾಜರಾತಿ ನೀಡಿದ್ದೂ ಉಂಟು. ಪಂಚಾಯ್ತಿ ಮುಖ್ಯ ಅಧಿಕಾರಿ



ಸೇರಿದಂತೆ ಇಲ್ಲಿನ ನೌಕರರು ಹನೂರಿನಲ್ಲಿ ಉಳಿಯದೆ ಮೈಸೂರು, ಚಾಮರಾಜನಗರ, ಯಳಂದೂರು, ಕೊಳ್ಳೇಗಾಲದ ವಿವಿಧ ಭಾಗಗಳಿಂದ ಬರುತ್ತಿದ್ದಾರೆ. ಇದರಿಂದಾಗಿ ದಿನನಿತ್ಯದ ಕೆಲಸಗಳು ಸಕಾಲದಲ್ಲಿ ನಡೆಯದೆ ಜನಸಾಮಾನ್ಯರುಸಮಸ್ಯೆ ಎದುರಿಸುತ್ತಿದ್ದಾರೆ. ಇಷ್ಟಾದರೂ ಸಿಬ್ಬಂದಿ ಮೇಲೆ ಕ್ರಮ ಕೈಗೊಳ್ಳಲು ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ.

ಪಂಚಾಯ್ತಿ ವರಮಾನಕ್ಕೂ ಬಿಸಿ: ಪಟ್ಟಣ ಪಂಚಾಯ್ತಿ ವ್ಯಾಪ್ತಿಯ 5000ಕ್ಕೂ ಹೆಚ್ಚು ಮನೆಗಳಿದ್ದು, ದಿನನಿತ್ಯ ನಾಗರಿಕರು ಇ-ಸ್ವತ್ತು ಪಡೆಯಲು ಮತ್ತು ಸರ್ಕಾರ ಇತ್ತೀಚೆಗೆ ಬಿ-ಖಾತೆ ನೀಡಲು ಸಹ ಸರ್ಕಾರ ಆದೇಶಿಸಲಾಗಿದೆ. ಇಲ್ಲಿನ ನಾಗರಿಕರಿಗೆ ಕಟ್ಟಡ ಪರವಾನಗಿ ಮತ್ತು ಎನ್‌ಓಸಿ ಪಡೆಯಲು ಆನ್ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಇಲ್ಲಿನ ಮುಖ್ಯಾಧಿಕಾರಿ ಮತ್ತು ಕೆಲ ಸಿಬ್ಬಂದಿ ನಿಗದಿತ ಸಮಯಕ್ಕೆ ಕಚೇರಿಗೆ ಹಾಜರಾಗದೆ ನಾಗರಿಕರಿಗೆ ಕೆಲಸ ಕಾರ್ಯಗಳು ನಡೆಯುತ್ತಿಲ್ಲ.

ಇದರಿಂದಾಗಿ ಇ-ಸ್ವತ್ತು ಕಟ್ಟಡ ಪರವಾನಿಗೆ ಹಾಗೂ ಜನನ-ಮರಣ ಪ್ರಮಾಣ ಪತ್ರ, ಉದ್ಯಮ ಪರವಾನಿಗೆ ಸೇರಿ ಹಲವು ಕೆಲಸಗಳು ವಿಳಂಬವಾಗುತ್ತಿವೆ. ನಾಗರಿಕರು ಪ್ರಶ್ನೆ ಮಾಡಿದರೆ ಕೆಲಸ ಮಾಡದೆ ಸಿಬ್ಬಂದಿ ಹಿಂಬರಹ ನೀಡುತ್ತಿದ್ದು, ಇದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಉಪ ವಿಭಾಗಾಧಿಕಾರಿ ಆದೇಶಕ್ಕೆ ಕಿಮ್ಮತ್ತಿಲ್ಲ: ಪಪಂನಲ್ಲಿ ಭರತ್ ಅವರು ರಾಜಸ್ವ ನಿರೀಕ್ಷಕರಾಗಿದ್ದು, ಕೆಲಸಗಳು ಸಕಾಲದಲ್ಲಿ ಆಗದ ಕಾರಣ ಸಾಕಷ್ಟು ದೂರುಗಳು ಬರುತ್ತಿವೆ. ಈ ಹಿನ್ನೆಲೆ ಉಪವಿಭಾಗಾಧಿಕಾರಿಗಳು ಪಂಚಾಯ್ತಿಗೆ ಭೇಟಿ ನೀಡಿದ್ದ ವೇಳೆ ನಾಗರಿಕರಿಂದ ವ್ಯಾಪಕವಾಗಿ ದೂರುಗಳು ಬಂದ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲು ಜಿಲ್ಲಾಡಳಿತಕ್ಕೆ ಶಿಫಾರಸ್ಸು ಮಾಡಿದ್ದಾರೆ. ಆದರೂ ಸಹ ಇಲ್ಲಿನ ಸಿಬ್ಬಂದಿ ಸುಧಾರಿಸುತ್ತಿಲ್ಲ.

> **ನಾವು ಕೂಲಿ ಕಾರ್ಮಿಕರಾಗಿದ್ದು, ಸಣ್ಣ ಮನೆ ನಿರ್ಮಿಸಲು ಎನ್‌ಓಸಿಗಾಗಿ ಕಳೆದ ವರ್ಷ ಡಿ.5ರಂದೇ ಆನ್ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದೆವು. ಆದರೆ ವಿದ್ಯುತ್ ಸಂಪರ್ಕ ಪಡೆಯಲು ಎನ್‌ಓಸಿ ನೀಡದೆ ಸತಾಯಿಸುತ್ತಿದ್ದಾರೆ. ಜನಪ್ರತಿನಿಧಿಗಳು ಮತ್ತು ಹಿರಿಯ ಅಧಿಕಾರಿಗಳು ಇತ್ತ ಗಮನ ಹರಿಸಬೇಕು**
> • **ಜೈ ಬಾಲು** ಹನೂರು ನಿವಾಸಿ

> **ಹನೂರು ಪಟ್ಟಣ ಪಂಚಾಯ್ತಿಯಲ್ಲಿನ ಸಮಸ್ಯೆಗಳ ಕುರಿತಂತೆ ಈಗಾಗಲೇ ಸಾಕಷ್ಟು ದೂರುಗಳು ಬಂದಿವೆ. ಅಲ್ಲಿನ ಅಶುದ್ಧ ವಾತಾವರಣದ ಬಗ್ಗೆಯೂ ತಕರಾರುಗಳೆದ್ದಿವೆ. ಜನರ ಕಾರ್ಯಗಳಿಗೆ ಹಿನ್ನಡೆಯಾಗುತ್ತಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.**
> • **ಚೈತ್ರ** ಪಟ್ಟಣ ಪಂಚಾಯ್ತಿ ಆಡಳಿತ ಅಧಿಕಾರಿ, ಹನೂರು

> **ಪಟ್ಟಣ ಪಂಚಾಯ್ತಿ ಕಚೇರಿಯಲ್ಲಿ ಜನರ ಕೆಲಸಗಳು ಸಕಾಲದಲ್ಲಿ ನಡೆಯುತ್ತಿಲ್ಲ. ಇ-ಸ್ವತ್ತು, ಎನ್‌ಓಸಿ ಸೇರಿ ಹಲವು ಸೌಲಭ್ಯಗಳು ಜನರ ಕೈಸೇರುತ್ತಿಲ್ಲ. ಮುಖ್ಯಾಧಿಕಾರಿ ಶಾಸಕರ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ. ಇದರ ವಿರುದ್ಧ ಜಿಲ್ಲಾಡಳಿತ ಕ್ರಮ ಕೈಗೊಳ್ಳದಿದ್ದರೆ, ಪ್ರತಿಭಟನೆ ನಡೆಸಲಾಗುತ್ತದೆ.**
> • **ಬಸವರಾಜ್** ಛಲವಾದಿ ಮಹಾಸಭಾ ತಾಲೂಕು ಅಧ್ಯಕ್ಷ

ರೋಟರಿಯಿಂದ ನಾಡಿದ್ದು ಉಚಿತ ಕೃತಕ ಕೈ-ಕಾಲು ಜೋಡಣೆ ಶಿಬಿರ

ಚಾಮರಾಜನಗರ ಬಿ.ರಾಚಯ್ಯ ರಸ್ತೆಯಲ್ಲಿ ಆಯೋಜನೆ

• **ಕನ್ನಡಪ್ರಭ ವಾರ್ತೆ** ಚಾಮರಾಜನಗರ

ರೋಟರಿ ಸಂಸ್ಥೆಯಿಂದ ಉಚಿತ ಕೃತಕ ಕೈ-ಕಾಲು ಜೋಡಣಾ ಶಿಬಿರವು ಮೇ 10ರಂದು ನಡೆಯಲಿದೆ ಎಂದು ರೋಟರಿ ಸಂಸ್ಥೆಯ ಜಿಲ್ಲಾ ಮಾಜಿ ಗವರ್ನರ್ ಡಾ.ನಾಗಾರ್ಜುನ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮೇ 10ರಂದು ರೋಟರಿ ಭವನದಲ್ಲಿ ಬೆಳಗ್ಗೆ 9:30ಕ್ಕೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಈಗಾಗಲೇ 100 ಮಂದಿ ನೋಂದಾಯಿಸಿಕೊಂಡಿದ್ದಾರೆ. ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ದಿವ್ಯಾಂಗರು ಶಿಬಿರದ ಸದುಪಯೋಗಪಡಿಸಿಕೊಳ್ಳುವಂತೆ ಮನವಿ ಮಾಡಿದರು.

ಈಗಾಗಲೇ 100 ಮಂದಿ ನೋಂದಣಿ

ಅಧ್ಯಕ್ಷ ಕಾಗಲವಾಡಿ ಚಂದ್ರು ಅವರ ಆಶಯದಂತೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ನನ್ನ ಒಂದು ವರ್ಷದ ಅವಧಿಯ 300ನೇ ಕಾರ್ಯಕ್ರಮ ಉಚಿತ ಕೃತಕ ಕೈ-ಕಾಲು ಜೋಡಣಾ ಶಿಬಿರವಾಗಿದೆ. ಜಿಲ್ಲೆಯಲ್ಲಿ ಕೈ-ಕಾಲು ತೊಂದರೆಯುಳ್ಳುವರು ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಹೆಚ್ಚಿನ ಮಾಹಿತಿಗಾಗಿ ನೋಂದಣಿಗಾಗಿ 9620485806, 8088223227, 9538035559, 9449971709 ಸಂಪರ್ಕಿಸಬಹುದಾಗಿದೆ. ಪತ್ರಿಕಾಗೋಷ್ಠಿಯಲ್ಲಿ ರೋಟರಿ ಮಾಜಿ ಅಧ್ಯಕ್ಷ ಚಂದ್ರಪ್ರಭ ಜೈನ್, ಸಂಸ್ಥೆಯ ಮುಂದಿನ ಸಾಲಿನ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ, ಕಾರ್ಯದರ್ಶಿ ಅಂಕಶೆಟ್ಟಿ ಹಾಜರಿದ್ದರು.

ಸುದ್ದಿ ಸಿಂಚನ

ಸ್ತ್ರೀಯರಿಗೆ ಉಚಿತ ಹೊಲಿಗೆ ತರಬೇತಿಗೆ ಅರ್ಜಿ ಆಹ್ವಾನ

ಚಾಮರಾಜನಗರ: ಎಸ್‌ಬಿಐ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ವತಿಯಿಂದ ಗ್ರಾಮೀಣ ಭಾಗದ ನಿರುದ್ಯೋಗ ಯುವಕ, ಯುವತಿಯರಿಗೆ ಊಟ-ವಸತಿಗಳೊಂದಿಗೆ ಉಚಿತವಾಗಿ ಮಹಿಳಾ ಹೊಲಿಗೆ ತರಬೇತಿ ನೀಡಲಿದ್ದು, ಯುವಕ ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಮೇ 11ರಂದು ತರಬೇತಿ ಪ್ರಾರಂಭವಾಗಲಿದ್ದು, 31 ದಿನಗಳ ಕಾಲ ತರಬೇತಿ ನೀಡಲಾಗುವುದು. ಅಭ್ಯರ್ಥಿಗಳು 18-45 ವರ್ಷದೊಳಗಿನವರಾಗಿರಬೇಕು. ತರಬೇತಿಗೆ ಬರುವಾಗ ಆಧಾರ್ ಕಾರ್ಡ್, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ಬ್ಯಾಂಕ್ ಪಾಸ್ ಪುಸ್ತಕ, ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ನಕಲು ಪ್ರತಿ ಮತ್ತು 4 ಭಾವಚಿತ್ರಗಳನ್ನು ತರಬೇಕು. ತರಬೇತಿಯನ್ನು ಮಾದಾಪುರದ ಸಂತೇಮರಳ್ಳಿ ರಸ್ತೆಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟಲ್ ಕಟ್ಟಡದ ಎಸ್‌ಬಿಐ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ 9606098878, 8722483393, 7676291416 ಸಂಪರ್ಕಿಸುವಂತೆ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರೋತ್ಸಾಹ ಧನ, ಪೋಷಣಾ ಭತ್ಯೆಯನ್ನು ನೀಡಲು ಅರ್ಜಿ ಆಹ್ವಾನ

ಗುಂಡ್ಲುಪೇಟೆ: ಪುರಸಭೆ ನಿಧಿಯಡಿ 2026-27ನೇ ಸಾಲಿನ ಶೇ.24.10, ಶೇ.7.25 ಹಾಗೂ ಶೇ.5ರ ಯೋಜನೆಯ ಅನುದಾನದಲ್ಲಿ ಪದವಿಯಲ್ಲಿ ಉತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಹಾಗೂ ವಿಶೇಷಚೇತನರಿಗೆ ಪೋಷಣಾ ಭತ್ಯೆ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಬಿಇ, ಎಂಬಿಬಿಎಸ್, ಬಿಡಿಎಸ್, ಬಿಎಸ್‌ಸಿ, ಪದವಿಯಲ್ಲಿ ಉತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಮತ್ತು ವಿಶೇಷಚೇತನರಿಗೆ ನೀಡಲಾಗುವ ಪೋಷಣಾ ಭತ್ಯೆಗೆ ಪುರಸಭೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಅರ್ಹ ಬಡ ಕುಟುಂಬಗಳು ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ಪುರಸಭೆ ಕಚೇರಿಯಿಂದ ಮೇ 8ರಿಂದ ಜೂ.6ರವರೆಗೆ ಅರ್ಜಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಜೂ.9ರ ಸಂಜೆ 4 ಗಂಟೆಯೊಳಗೆ ಪುರಸಭೆಗೆ ಸಲ್ಲಿಸಬಹುದು. ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಈಗಾಗಲೇ ಸವಲತ್ತು ಪಡೆದಿರುವವರು ಪುನಃ ಅರ್ಜಿ ಸಲ್ಲಿಸುವಂತಿಲ್ಲ. ಪರಿಶಿಷ್ಟ ಜಾತಿಗೆ ಸೇರಿದ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಬಿಇ. ಎಂಬಿಬಿಎಸ್, ಬಿಡಿಎಸ್, ಬಿಎಸ್‌ಸಿ, ಅಗ್ರಿಕಲ್ಚರ್, ಹಾರ್ಟಿಕಲ್ಚರ್ ಪದವಿಯಲ್ಲಿ ಉತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುವುದು. ಪರಿಶಿಷ್ಟ ವರ್ಗಕ್ಕೆ ಸೇರಿದ ಎಸ್‌ಎಸ್‌ಎಲ್‌ಸಿ ಪಿಯುಸಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡೆಯಲ್ಲಿ ಭಾಗವಹಿಸಿ ಜಯಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುವುದು.

ಪೌರ ನೌಕರರಿಗೆ 5 ತಿಂಗಳಿಂದ ವೇತನವಿಲ್ಲ, ರಜೆಯೂ ಇಲ್ಲ!

ಪೌರಾಯುಕ್ತರ ವಿರುದ್ಧ ಪ್ರತಿಭಟನೆಗೆ ನೀರುಗಂಟಿಗಳ ನಿರ್ಧಾರ



ಕೊಳ್ಳೇಗಾಲದ ವಾಟರ್ ಟ್ಯಾಂಕ್ ಬಳಿ ನೀರು ಗಂಟಿಗಳು ಸಭೆ ನಡೆಸಿ ನಾಳೆಯಿಂದ ನೀರು ಸರಬರಾಜು ಸ್ಥಗಿತಗೊಳಿಸುವ ಕುರಿತು ನಿರ್ಧಾರ ಪ್ರಕಟಿಸಿದರು. ಬಸವರಾಜು, ಮಾಧು, ಮಹದೇವ ಇನ್ನಿತರಿದ್ದರು.

• **ಕನ್ನಡಪ್ರಭ ವಾರ್ತೆ** ಕೊಳ್ಳೇಗಾಲ

ನೀರು ಸರಬರಾಜು ಹೊರಗುತ್ತಿಗೆ ಪೌರ ನೌಕರರಿಗೆ 5 ತಿಂಗಳಿಂದ ವೇತನ ಪಾವತಿಸದ ಹಿನ್ನೆಲೆ ಬೇಸತ್ತ ನೀರು ಪೂರೈಕೆ ಹೊರಗುತ್ತಿಗೆ ನೌಕರರು ಶ್ರೀಘ್ರದಲ್ಲಿಯೇ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ.

ನಮಗೆ ವೇತನ ಮಂಜೂರು ಮಾಡದ್ದಿದರೆ ನಾಳೆಯಿಂದಲೇ ನೀರು ಸರಬರಾಜು ಸ್ಥಗಿತಗೊಳಿಸಲಾಗುವುದು ಎಂದು ಅಧ್ಯಕ್ಷ ಪುಟ್ಟಮಾದು ತಿಳಿಸಿದ್ದಾರೆ.

ಪಟ್ಟಣದ ಡಾ. ರಾಜ್‌ಕುಮಾರ್ ರಸ್ತೆಯ ನೀರು ಶುದ್ಧೀಕರಣ ಘಟಕದ ಮುಂದೆ ನೀರು ಸರಬರಾಜು ಹೊರಗುತ್ತಿಗೆ ನೌಕರರು ಸಭೆ ನಡೆಸಿ ಸರ್ವಾನುಮತದಿಂದ ತೀರ್ಮಾನ ಕೈಗೊಂಡಿರುವುದರಿಂದ ನಗರಸಭೆ ವ್ಯಾಪ್ತಿಯ ಜನರು ನಮ್ಮ ಜೊತೆ ಸಹಕರಿಸಬೇಕು. 5 ತಿಂಗಳಿಂದ ನಮಗೆ ವೇತನ ನೀಡಿಲ್ಲ, ಈ ಹಿನ್ನೆಲೆ ನಾವು ಸಂಕಷ್ಟಕ್ಕಿಡಾಗಿದ್ದೇವೆ. ಪ್ರತಿಭಟನೆ ಅನಿವಾರ್ಯ ಎಂದರಲ್ಲದೆ ಕಳೆದ ಐದಾರು ತಿಂಗಳಿಂದ ನೀರು ಸರಬರಾಜು ಮಾಡುವ ಎಲ್ಲಾ ನೌಕರರಿಗೆ ವೇತನ ಕೇಳಿದರೂ ಪೌರಾಯುಕ್ತರು ಸ್ಪಂದಿಸುತ್ತಿಲ್ಲ. ಆದ್ದರಿಂದ ಶುಕ್ರವಾರದಿಂದ ನಗರಸಭೆ ವ್ಯಾಪ್ತಿಯಲ್ಲಿ ನೀರು ಸರಬರಾಜುಮಾಡುವುದಿಲ್ಲ. ನಗರಸಭೆ ಆಡಳಿತಾಧಿಕಾರಿಗಳು, ಜನಪ್ರತಿನಿಧಿಗಳು ಕೂಡಲೇ ಮಧ್ಯಪ್ರವೇಶಿಸಿ ಎಲ್ಲಾ ವಾಟರ್ ಮ್ಯಾನಗಳಿಗೆ ಬಾಕಿ ವೇತನ ಕೊಡಿಸಬೇಕು. ಮುಂದಿನ ದಿನಗಳಲ್ಲಿ ಪ್ರತಿ ತಿಂಗಳು ವೇತನ ಸಿಗುವಂತೆ ನೋಡಿಕೊಳ್ಳುವ ಮೂಲಕ ನಮ್ಮ ಸಂಕಷ್ಟಕ್ಕೆಸ್ಪಂದಿಸುವಂತಾಗಬೇಕು. ಇಲ್ಲವಾದಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ನೀರು ಸರಬರಾಜು ಹೊರಗುತ್ತಿಗೆ ಪೌರ ನೌಕರರ ಸಂಘ, ಉಪಾಧ್ಯಕ್ಷ ಬಸವರಾಜು, ಖಜಾಂಚಿ ಸುರೇಶ್, ಸೋಮಣ್ಣ, ಕೃಷ್ಣಸ್ವಾಮಿ, ನವೀನ್, ಶ್ರೀನಿವಾಸ್, ಮಹದೇವ ಇನ್ನಿತರಿದ್ದರು.

ವಿಎಸ್ ಡೊಡ್ಡಿ ಶಾಲೆ ಮುಖ್ಯಶಿಕ್ಷಕರಿಗೆ ಬೀಳ್ಕೊಡುಗೆ

• **ಕನ್ನಡಪ್ರಭ ವಾರ್ತೆ** ಹನೂರು

ತಾಲೂಕಿನ ವಿಎಸ್ ದೊಡ್ಡಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ ಮಹದೇವ ಅವರಿಗೆ ಬಿಜಿ ದೊಡ್ಡಿ ವಿಶ್ವಜ್ಞಾನಿ ಡಾ.ಬಿ.ಆರ್. ಅಂಬೇಡ್ಕರ್ ಬಳಗದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.



ಕಾರ್ಯಕ್ರಮದಲ್ಲಿ ಮುಖ್ಯ ಅಥಿಗಳಾಗಿ ಭಾಗವಹಿಸಿದ್ದ ಬಿ. ಗುಂಡಾಪುರ ಗ್ರಾಮದ ಯಜಮಾನರಾದ ಆರ್. ಮಹದೇವ ಅವರು ಮಾತನಾಡಿ, ಶಿಕ್ಷಕ ವೃತ್ತಿ ಅತ್ಯಂತ ಪೂಜ್ಯನೀಯ ಹಾಗೂ ಆದರ್ಶವಾದ ವೃತ್ತಿ ಇಂತಹ ವೃತ್ತಿಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಭವಿಷ್ಯ ಭಾರತದ ಪ್ರಜೆಗಳ ನಿರ್ಮಾಣಕ್ಕೆ ಶ್ರಮಿಸಿದ ಶಿಕ್ಷಕ ಮಹದೇವ ಅವರ ನಿವೃತ್ತ ಜೀವನ ಸುಖಕರವಾಗಿರಲಿ ಎಂದರು.

ಪತ್ರಕರ್ತ ಪ್ರಭುಸ್ವಾಮಿ ಮಾತನಾಡಿ, ರಾಜ್ಯದ ವಿವಿಧ ಜಿಲ್ಲೆಗಳ ಶಾಲೆಗಳಲ್ಲಿ 35 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾಗಿರುವ ವಿ.ಎಸ್. ದೊಡ್ಡಿಯ ಮುಖ್ಯ ಶಿಕ್ಷಕ ಮಹದೇವ ಅವರಿಗೆ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಗುತ್ತಿರುವುದು ಶ್ಲಾಘನೀಯ ವಿಚಾರ. ಬಿ.ಜಿ. ದೊಡ್ಡಿ ವಿಶ್ವಜ್ಞಾನಿ ಡಾ.ಬಿ. ಆರ್. ಅಂಬೇಡ್ಕರ್ ಬಳಗದ ಸಂಘ ರಚನೆ ಹಾಗೂ ನಾಮ ಫಲಕ ಉದ್ಘಾಟನೆ ಕಾರ್ಯದಲ್ಲಿ ಭಾಗಿಯಾಗಿರುವುದು ಸಾರ್ಥಕತೆಯನ್ನು ತಂದಿದೆ. ಮುಂದಿನ ದಿನಗಳಲ್ಲಿ ಸಂಘದ ಬೆಳವಣಿಗೆಗೆ ಪ್ರತಿಯೊಬ್ಬರು ಕೈಜೋಡಿಸಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪೊಲೀಸ್ ಇಲಾಖೆಯ ದಫೇದರ್ ಮಲ್ಲಪ್ಪ, ಗ್ರಾಮದ ಯಜಮಾನರಾದ ಮಾದೇವ, ಪುಟ್ಟಸ್ವಾಮಿ, ಅಂಡೆಕುರುಬರ ದೊಡ್ಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕ ಮಹಾದೇವಸ್ವಾಮಿ, ಪತ್ರಕರ್ತ ರಮೇಶ್, ಹುತ್ತೂರು ಗ್ರಾಪಂ ಮಾಜಿ ಸದಸ್ಯ ಸಿದ್ದಯ್ಯ, ಸಂಘದ ಅಧ್ಯಕ್ಷ ಎಸ್. ಲಿಂಗರಾಜು, ಉಪಾಧ್ಯಕ್ಷ ಮಂಜು, ಗ್ರಾಮದ ಮುಖಂಡರಾದ ದೊಡ್ಡಮಾದ, ಮಾದೇವ, ಸಿದ್ದರಾಜು, ಸಂಜಯ್, ಮಹಿಳೆಯರು, ವಿದ್ಯಾರ್ಥಿಗಳಿದ್ದರು.

ಕಾಲೇಜು ಜೀವನ ಜ್ಞಾನದ ತಾಣ: ಮಮತ

• **ಕನ್ನಡಪ್ರಭ ವಾರ್ತೆ** ಕೊಳ್ಳೇಗಾಲ



ವಿದ್ಯಾರ್ಥಿನಿಯರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಈಗಿನಿಂದಲೇ ತಯಾರಾಗಬೇಕು. ಕಾಲೇಜು ಜೀವನ ವಿದ್ಯೆ ಕಲಿಸುವ ಜೊತೆ ಶಿಸ್ತು, ಸಂಯಮ ಬೆಳೆಸುವ ತಾಣ, ಸ್ನೇಹ ಬಾಂಧವ್ಯ, ಜೀವನದಲ್ಲಿ ಸಾಧನೆಗೆ ಪ್ರೋತ್ಸಾಹ ನೀಡುವ ವ್ಯಕ್ತಿತ್ವದ ವಿಕಸನ ವೇದಿಕೆಯೂ ಹೌದು ಎಂದು ಉಪನ್ಯಾಸಕಿ, ಜೆಎಸ್‌ಎಸ್ ಐಕ್ಯೂ ಸಂಚಾಲಕಿ ಮಮತ ಹೇಳಿದರು. ಜೆಎಸ್‌ಎಸ್ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ, ವಿದ್ಯಾರ್ಥಿಗಳು ಇಲ್ಲಿ ಜ್ಞಾನದ ಜೊತೆ ಸವಾಲುಗಳನ್ನು ಎದುರಿಸಬೇಕು. ಇಂತಹ ಕಾರ್ಯಕ್ರಮಗಳು ಜ್ಞಾನ ಮತ್ತು ವ್ಯಕ್ತಿತ್ವ ರೂಪಿಸುವಲ್ಲಿ ಸಹಕಾರಿ. ಕಲಿತ ವಿದ್ಯೆ ಸದ್ಬಳಕೆಯಾಗಲಿ, ಕಲಿಕೆ ಜೊತೆ ನಿಮ್ಮ ಪೋಷಕರು, ಗುರು ಹಿರಿಯರನ್ನು ಗೌರವಿಸಿ ಉನ್ನತ ಸ್ಥಾನ ಅಲಂಕರಿಸಿ ಎಂದರು. ಈ ವೇಳೆ ಪ್ರಾಂಶುಪಾಲ ಡಾ. ಕೊಂಗಳಪ್ಪ, ಉಪನ್ಯಾಸಕಿ ಪುಟ್ಟಮ್ಮ ಇನ್ನಿತರಿದ್ದರು.

22ಕ್ಕೆ ಬಸವೇಶ್ವರರ ಜಯಂತ್ಯುತ್ಸವ ಆಚರಣೆ

• **ಕನ್ನಡಪ್ರಭ ವಾರ್ತೆ** ಚಾಮರಾಜನಗರ

ಚಾಮರಾಜನಗರದಲ್ಲಿ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠ ಹಾಗೂ ಬಸವ ಬಳಗಗಳ ಒಕ್ಕೂಟದ ವತಿಯಿಂದ ಮೇ 22 ರಂದು ನಡೆಯಲಿರುವ ಕರ್ನಾಟಕ ಸಾಂಸ್ಕೃತಿಕ ನಾಯಕ, ವಿಶ್ವಗುರು, ಜಗಜ್ಯೋತಿ ಬಸವೇಶ್ವರರ ಜಯಂತೋತ್ಸವ-2026 ಕಾರ್ಯಕ್ರಮದ ಭಿತ್ತಿ ಪತ್ರವನ್ನು ನಗರದಲ್ಲಿ ಸುತ್ತೂರು ಶ್ರೀಕ್ಷೇತ್ರದ ಶ್ರೀ ಶಿವರಾತ್ರಿ ದೇಶೀ ಕೇಂದ್ರ ಸ್ವಾಮೀಜಿ ಬಿಡುಗಡೆಗೊಳಿಸಿದರು.

ನಗರದ ಡಾ. ರಾಜ್‌ಕುಮಾರ್ ಕಲಾಮಂದಿರದ ಮುಂಭಾಗದಲ್ಲಿ ಬಸವ ಬಳಗದ ಒಕ್ಕೂಟದ ಅಧ್ಯಕ್ಷ ಪಿ. ಮರಿಸ್ವಾಮಿ ಹಾಗೂ ಗಣ್ಯರ ಸಮ್ಮುಖದಲ್ಲಿ ಶ್ರೀಗಳು ಪೋಸ್ಟರ್ ಬಿಡುಗಡೆ ಮಾಡಿ ಶುಭ ಕೋರಿದರು.

ಜಿಲ್ಲೆಯಲ್ಲಿ ಪ್ರಥಮವಾಗಿ ಎಲ್ಲಾ ವೀರಶೈವ ಲಿಂಗಾಯತ ಸಂಘಟನೆಗಳ ಸಹಭಾಗಿತ್ವದಲ್ಲಿ ಬಸವ ಬಳಗಗಳ ಒಕ್ಕೂಟವನ್ನು ರಚನೆ ಮಾಡಿಕೊಂಡು ಜಿಲ್ಲಾ ಕೇಂದ್ರದಲ್ಲಿ ಮೇ 22 ರಂದು ಅದ್ದೂರಿಯಾಗಿ ನಡೆಯಲಿರುವ ಬಸವ ಜಯಂತಿ ಕಾರ್ಯಕ್ರಮ ಯಶಸ್ವಿಯಾಗಲಿ. ಬಸವಾದಿ ಶರಣರ ಪ್ರೇರಣೆ ಎಲ್ಲರಿಗೂ ದೊರೆಯಲಿದೆ ಎಂದು ಶುಭ ಕೋರಿದರು.

ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಹಾಗೂ ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ ಮಾತನಾಡಿ, ಜಿಲ್ಲಾ ಕೇಂದ್ರದಲ್ಲಿ ಮೇ 22ರ ಶುಕ್ರವಾರ ರಂದು ಬಸವ ಜಯಂತಿ ಮರೆವಣಿಗೆ ಅದ್ದೂರಿಯಾಗಿ ನಡೆಯಲಿದೆ. ಸಮಾನತೆಯ ಹರಿಕಾರ ಬಸವೇಶ್ವರ ಜಯಂತಿ ಸಮಸ್ತ ಜನರ ಹಬ್ಬವಾಗಿದೆ. ಪ್ರತಿ ಗ್ರಾಮಗಳಿಗೂ ಭೇಟಿ ನೀಡಿ, ಕರಪತ್ರ ನೀಡುವ ಜೊತೆಗೆ ಕಾರ್ಯಕ್ರಮಕ್ಕೆ ಅಹ್ವಾನ ನೀಡಲಿದ್ದು. ಸುತ್ತೂರು ಶ್ರೀಗಳು ಹಾಗೂ ಅನೇಕ ಗಣ್ಯರು ಭವ್ಯ ಶ್ರೀ ಬಸವೇಶ್ವರರ ಮೆರವಣಿಗೆಗೆ ಅಂದು ಬೆಳಗ್ಗೆ 10 ಗಂಟೆಗೆ ಚಾಲನೆ ನೀಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಸಚಿವರು, ಸಂಸದರು, ಮಾಜಿ ಸಚಿವರು, ಶಾಸಕರು, ಹರಗುರು ಚರಮೂರ್ತಿಗಳು, ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಈ ವೇಳೆ ಶರಣ ಸಾಹಿತ್ಯ ಪರಿಷತ್ತ ರಾಜ್ಯಾಧ್ಯಕ್ಷ ಡಾ. ಸೋಮಶೇಖರ್, ಮಾಜಿ ಸಚಿವೆ ಡಾ. ಗೀತಾ ಮಹದೇವಪ್ರಸಾದ್, ಮಾಜಿ ಶಾಸಕ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಕೆ. ರವಿಕುಮಾರ್, ಬಸವ ಬಳಗಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ದೊಡ್ಡರಾಯಪೇಟೆ ಗಿರೀಶ್, ಮಹಾಸಭಾದ ಅಧ್ಯಕ್ಷ ಮೂಡ್ಲುಪುರ ನಂದೀಶ್, ಮಹಾಸಭಾದ ತಾಲೂಕು ಅಧ್ಯಕ್ಷ ಬಾಲಚಂದ್ರ ಮೂರ್ತಿ, ಎಪಿಎಂಸಿ ನಿರ್ದೇಶಕ ಅಲೂರು ಪ್ರದೀಪ್, ಬಾಬು, ಕದಳಿ ವೇದಿಕೆ ಅಧ್ಯಕ್ಷ ವಸಂತಮ್ಮ, ರತ್ನಮ್ಮ, ವೀರಭದ್ರ ಸ್ವಾಮಿ, ಪ್ರಭುಸ್ವಾಮಿ ಮೊದಲಾದವರು ಇದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ: ಬೆಂಅಪ್ರಾ/ನಯೋಸ/CLU-530/25-26/495/2026-27 ದಿನಾಂಕ: 06.05.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015 ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎನ್. ಜಯರಾಮ್ ರೆಡ್ಡಿ ಮತ್ತು ಇತರರು	ಬೆಂಗಳೂರು ಪೂರ್ವ	ವರ್ತೂರು	ವಾಲೇಪುರ	30/6	0-14.50	ವ್ಯವಸಾಯ	ವಸತಿ
2					30/8ರ ಪೈಕಿ	0-03.25		
3					41/2	1-15		
4					41/3ರ ಪೈಕಿ	0-02.75		

ಷರಾ: ಪ್ರಶ್ನಿತ ಜಮೀನುಗಳಲ್ಲಿ ವಸತಿ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತದೆ. ವಸತಿ ಕಟ್ಟಡದ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಸತಿ ಕಟ್ಟಡ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಅರ್ಜಿದಾರರು ತಿಳಿಸುತ್ತಾ, 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ" ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ. ಸಹಾಯವಾಣಿ/ವಾಟ್ಸ್‌ಪ್: 9483166622 (24X7). @BDAOfficialGok

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಕಾಣೆಯಾಗಿದ್ದಾರೆ



ಶ್ರೀ ಪ್ರಕಾಶ ಕಮ್ಮಾರ

ಜನ್ಮ ದಿನಾಂಕ: 1-1-1981 ವಯಸ್ಸು 46 ವರ್ಷ ಧಾರವಾಡ ಗುಲಗಂಜಿಕೊಪ್ಪ ಅಳಗವಾಡಿ ಚಾಳ ಇವರ ಬಾಡಿಗೆ ಮನೆಯಲ್ಲಿದ್ದರು ಸುಮಾರು 15 ದಿನಗಳಿಂದ ಮನೆಗೆ ಬಂದಿರುವುದಿಲ್ಲ ಎಂದು ಬಾಬು ಮನೆಯವರು ತಿಳಿಸಿರುತ್ತಾರೆ, ಇವರಿಗೆ ಕನ್ನಡ, ಇಂಗ್ಲೀಷ್, ಹಿಂದಿ ಮಾತನಾಡಲು ಬರುತ್ತದೆ ಇವರು ನನ್ನ ತಮ್ಮನಾಗಿರುವದರಿಂದ ದಯವಿಟ್ಟು ಯಾರಿಗಾದರೂ ಕಂಡರೆ ಈ ಕೆಳಗಿನ ನಂಬರಗೆ ತಿಳಿಸಲು ವಿನಂತಿಸಿಕೊಳ್ಳುತ್ತೇನೆ

ಶ್ರೀ, ಎಸ್. ವಿ. ಕಮ್ಮಾರ, ಮೊ.: 9945667100 ಶ್ರೀ ಪ್ರಶಾಂತ ವಿ. ಕಮ್ಮಾರ 9164568460, ದಯವಿಟ್ಟು ಯಾರಿಗಾದರೂ ಕಂಡರೆ ಈ ಮೇಲಿನ ನಂಬರಿಗೆ ಫೋನ ಮಾಡಿ ಮತ್ತು ತಮ್ಮ ಹತ್ತಿರ ಇರುವಂತೆ ನೋಡಿಕೊಳ್ಳಿ ಬಂದು ಕರೆದುಕೊಂಡು ಹೋಗುತ್ತೇವೆ. ದಯವಿಟ್ಟು ಸಹಾಯ ಮಾಡಿ.

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ Karnataka One State. Many worlds
(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)
ಕಾರ್ಯನಿರ್ವಾಹಕ ಕಛೇರಿ, 5ನೇ ಮಹಡಿ, ಇಂಧನ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560009, ದೂರವಾಣಿ: 080-42775575 ಫ್ಯಾಕ್ಸ್: (080) 42775589, ವೆಬ್‌ಸೈಟ್: www.kstdc.co
ಸಂ: KSTDC/PROC/01/2026-27/ ದಿನಾಂಕ: 07.05.2026

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಸಂಸ್ಥೆಯು ಆಸಕ್ತ/ಅರ್ಹ ಸರಬರಾಜುದಾರರು/ಸರಬರಾಜುದಾರ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳುವ ಸಂಬಂಧ ಟೆಂಡರ್ ಆಹ್ವಾನಿಸಿದೆ. ವಿವರ ಈ ಕೆಳಕಂಡಂತಿದೆ.

ಟೆಂಡರ್ ಸಂಖ್ಯೆ	ವಿವರ	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ
KSTDC/ 2026-27/ IND0038/ Call 2	ನಿಗಮದ ವಿವಿಧ ಮಯೂರ ಹೋಟೆಲ್ ಘಟಕಗಳಿಗೆ ಅವಶ್ಯಕವಿರುವ Kitchen Utensils and Other Items ಗಳನ್ನು ಸರಬರಾಜು ಮಾಡುವ ಸಂಬಂಧ	14.05.2026 at 16.30 hrs

ಆಸಕ್ತ /ಅರ್ಹ ಸರಬರಾಜುದಾರರು /ಸರಬರಾಜುದಾರ ಸಂಸ್ಥೆಗಳು ಟೆಂಡರ್ ದಾಖಲೆಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಜಾಲತಾಣ https://kppp.karnataka.gov.inಗೆ ಭೇಟಿ ನೀಡಲು ಕೋರಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9240214000/01 ಇ-ಮೇಲ್: support@eprochelpdesk.com ನ್ನು ಸಂಪರ್ಕಿಸುವುದು.

ಸಹಿ/- ಪ್ರಧಾನ ವ್ಯವಸ್ಥಾಪಕರು (ಆಡಳಿತ)/
ಟೆಂಡರ್ ಆಹ್ವಾನ ಪ್ರಾಧಿಕಾರ, ಕ.ರಾ.ಪ್ರ.ಅ.ನಿ.

ಕನ್ನಡಪ್ರಭ
SANDALWOOD ☆ TOLLYWOOD ☆ KOLLYWOOD ☆ MOLLYWOOD ☆ BOLLYWOOD ☆ HOLLYWOOD
ಚಿತ್ರಪ್ರಭ
ಪ್ರತಿ ಶುಕ್ರವಾರ ಸಿನಿಮಾ ಸುದ್ದಿಗೆ ಪುರವಣಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

ಟೆಂಡರ್ ಆಹ್ವಾನ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಬೆವಿಕಂ ಈ ಕೆಳಗಿನ ಕೆಲಸಕ್ಕಾಗಿ ಟೆಂಡರ್ ಆಹ್ವಾನಿಸುತ್ತದೆ. ಟೆಂಡರ್ ಸಂಖ್ಯೆ: BESCOM/2026-27/EL/WORK_INDENT1081. ಯೋಜನೆಯ ವಿವರ: ಬೆವಿಕಂನ BMAZ ಪ್ರದೇಶದಲ್ಲಿ NON DAS ಫೀಡರ್‌ಗಳ ಯಾಂತ್ರೀಕರಣ ವ್ಯವಸ್ಥೆ ಸ್ಥಾಪಿಸಲು ಟೆಂಡರ್ ಆಹ್ವಾನಿಸಲಾಗಿದೆ. ಬಿಡ್ ದಸ್ತಾವೇಜುಗಳ ವಿತರಣೆ ದಿನಾಂಕ: 13.05.2026 ರಂದು ಅಥವಾ ನಂತರದ ದಿನದಂದು. ಸಂಬಂಧಿಸಿದ ವಿಚಾರಣೆ ಬಗ್ಗೆ ವಿವರವಾದ ಪ್ರಕಟಣೆಯನ್ನು https://kppp.karnataka.gov.in ವೆಬ್‌ಸೈಟ್ ಅನ್ನು ಪ್ರವೇಶಿಸಿ ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/- ಪ್ರಧಾನ ವ್ಯವಸ್ಥಾಪಕರು (ಡಾಸ್), ಬಿಐಸಿಸಿ-1, 17ನೇ ಅಡ್ಡರಸ್ತೆ, 24ನೇ ಮುಖ್ಯರಸ್ತೆ, ಹೆಚ್.ಎಸ್.ಆರ್ ಬಡಾವಣೆ, 2ನೇ ಸೆಕ್ಟರ್, ಬೆಂಗಳೂರು-560 102.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ|| ಎಂ.ಹೆಚ್.ಮರಿಗೌಡ ರಸ್ತೆ, ಬೆಂಗಳೂರು-560029.
ಫೋನ್: 25536567/26096832/910/822 ಫ್ಯಾಕ್ಸ್: 080-25536105 ಇಮೇಲ್: purchase@kmf.coop
ಸಂ. ಕಹಾಮ/ಖರೀದಿ/ಟೆಂಡರ್-895/2025-26/Call-2 ದಿನಾಂಕ: 07.05.2026

ಟೆಂಡರ್ ಪ್ರಕಟಣೆ (ಕೆಪಿಪಿ- ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾ ಮಂಡಳ, ಬೆಂಗಳೂರು ಈ ಕೆಳಗೆ ತಿಳಿಸಿದ ಸೇವೆ ಪಡೆಯಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

SL no	Description	Approximate Quantity for (two years)
1	Production and Supply of Carbonated Flavoured Drinks brand Name Nandini Bounce (inclusive of processing,, standardization, packing, dispatch following FIFO) in Pet Bottles 200 Ml all Variants Bottle all including GST & Cess	10,80,000 Bottle
2	Production and Supply of Carbonated Flavoured Drinks brand Name Nandini Bounce (inclusive of processing,, standardization, packing, dispatch following FIFO) in Pet Bottles 500 Ml all Variants Bottle all including GST & Cess	7,200 Bottle
3	Production and Supply of Carbonated Flavoured Drinks brand Name Nandini Bounce (inclusive of processing,, standardization, packing, dispatch following FIFO) in Pet Bottles 1ltr all Variants Bottle all including GST & Cess	7,200 Litre

ಇಎಂಡಿ : ರೂ. 1,88,000/-/.

ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 14.05.2026 ರಂದು 17.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.-4/ಟೆಂಡರ/2026-27/755 ದಿನಾಂಕ: 06/05/2026

ಅಲ್ಪಾವಧಿ ಇ-ಮರುಟೆಂಡರ್ ಪ್ರಕಟಣೆ (Call-3)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 4059-ಎಸ್.ಸಿ.ಪಿ.-ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು (CMIDP) ಅಡಿ 1 ಕಾಮಗಾರಿ ಇದ್ದು, ಗುತ್ತಿಗೆಗೆ ಇಟ್ಟ ಮೊತ್ತ ರೂ. 80.00 ಲಕ್ಷ ಇರುವ ಕಾಮಗಾರಿಗೆ ಮರುಟೆಂಡರ್ ಆವ್ಹಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1) ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 12-05-2026 (ಸಾಯಂಕಾಲ 5.30 ಗಂಟೆಯುವರೆಗೆ), 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 14-05-2026 (ಸಾಯಂಕಾಲ 5.00 ಗಂಟೆಯವರೆಗೆ), 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 16-05-2026 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 5) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-207/KSMCA/2026-27

ಕರ್ನಾಟಕ ಸರ್ಕಾರ
ಉನ್ನತ ಶಿಕ್ಷಣ ಇಲಾಖೆ
6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು- 560001
ಸಂ. ಇಡಿ/12/ಕೆವಿವಿ/2026 ದಿನಾಂಕ: 06-05-2026

ಸಾರ್ವಜನಿಕ ಪ್ರಕಟಣೆ
ಕನ್ನಡ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಯ ನೇಮಕಾತಿ

ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, ಇವರು ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ ಕನ್ನಡ ವಿಶ್ವವಿದ್ಯಾಲಯಗಳ ಅಧಿನಿಯಮ 1991 ರ ಪ್ರಕರಣ 13(2) ರ ಉಪಬಂಧಗಳನುಸಾರ ನೇಮಕಾತಿ ಮಾಡಲು ಅರ್ಹ ಪ್ರಾಧ್ಯಾಪಕರು / ಶಿಕ್ಷಣ ತಜ್ಞರುಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಈ ಜಾಹೀರಾತು ಪ್ರಕಟಣೆಯಾದ 20 ದಿನಗಳ ಒಳಗಾಗಿ ಸ್ವೀಕೃತವಾಗುವಂತೆ " ಸರಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು - 560001" ಇವರಿಗೆ ಸಲ್ಲಿಸತಕ್ಕದ್ದು. ಇಮೇಲ್ : kannadaunivc2026@gmail.com. ವಿವರವಾದ ಅರ್ಜಿಗಳು ಮತ್ತು ಇತರೆ ವಿವರಗಳು ಉನ್ನತ ಶಿಕ್ಷಣ ಇಲಾಖೆಯ ವೆಬ್ ಸೈಟ್ https://hed.karnataka.gov.in. ನಲ್ಲಿ ಪಡೆಯಬಹುದು.

ಸಹಿ/-
ಸರ್ಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ
DIPR/CP/552/Zen/2026-27

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು - 560070.
ಫೋನ್ ನಂ. 080-26716046 ವೆಬ್‌ಸೈಟ್: http://kppp.karnataka.gov.in
ಸಂಖ್ಯೆ:ಕಾಅ/ಪಂರಾಇವಿ/ಬೆಂನ/ಎಇ-1/ಟೆಂಡರ್/06/2026-27 ದಿನಾಂಕ: 06.05.2026

ಕೆ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ ನೋಟೀಸ್ (ದ್ವಿ-ಲಕೋಟೆ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MLA Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ-ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ:25.05.2026 ರ ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ http://www.KPPP.karnataka.gov.inನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು.
ವಾಸಾಸಂಇ/ವಾಪ್ರ/557/ಎಸ್‌ಎಸ್‌ಸಿ/2026-27

ಕರ್ನಾಟಕ ಸರ್ಕಾರ
ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.
ಸಂಖ್ಯೆ:ಸಅಸಂ/ಟೆಂಡರ್-ಕಾಂಪಾ/ಸಿಆರ್-3/25-26/1 ದಿನಾಂಕ: 04.05.2026

ಅಲ್ಪಾವದಿ ಇ-ಟೆಂಡರ್ ಪ್ರಕಟಣೆ.
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026-27 ನೇ ಸಾಲಿನಲ್ಲಿ ಕಾಂಪಾ ಲೆಕ್ಕ ಶೀರ್ಷಿಕೆಯಡಿ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಅನುಬಂಧದಲ್ಲಿ ನಮೂದಿಸಲಾದ, **"ಮುಂಗಡ"** ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000 ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

1. ಇ-ಟೆಂಡರು ಸಲ್ಲಿಸಲು ಕೊನೆಯ ದಿ: 19.05.2026 ಅಪರಾಹ್ನ 4.00 ಗಂಟೆಯವರೆಗೆ 2. ಟೆಂಡರು ತೆರೆಯುವ ದಿ: 20.05.2026 ಅಪರಾಹ್ನ 4.30ಗಂಟೆ

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಆಯನೂರು ಉಪ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/17/05/194

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ರವರ ಕಛೇರಿ, ಸಾರ್ವಜನಿಕ ಬಹುಪಯೋಗಿ ಕಟ್ಟಡ, 9ನೇ ಮತ್ತು 10ನೇ ಮಹಡಿ, ಮೆಯೋಹಾಲ್ ಹತ್ತಿರ, ಎಂ.ಜಿ. ರಸ್ತೆ, ಬೆಂಗಳೂರು - 560001.
ಸಂಖ್ಯೆ: ಬೆಂಕೇನಪಾ/2026-27/ಎಸ್‌ಇ0169 ದಿನಾಂಕ: 07-05-2026

ಟೆಂಡರ್ ಅಧಿಸೂಚನೆ

ಬೆಂಗಳೂರು ಕೇಂದ್ರ ನಗರ ಪಾಲಿಕೆ (ಬೆಂಕೇನಪಾ) ಯು ಈ ಕೆಳಗೆ ತಿಳಿಸಿರುವ ಕೆಲಸಕ್ಕಾಗಿ ಅರ್ಹ ಬಿಡ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು: **ಬೆಂಗಳೂರು ಕೇಂದ್ರ ನಗರ ಪಾಲಿಕೆಯಲ್ಲಿ ಸ್ಮಾರ್ಟ್ ವರ್ಚುವಲ್ ಕ್ಲಿನಿಕ್‌ನ ವಿನ್ಯಾಸ, ಅಭಿವೃದ್ಧಿ, ಅನುಷ್ಠಾನ, ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಮಾಸ್ಟರ್ ಸಿಸ್ಟಮ್ ಇಂಟಿಗ್ರೇಟರ್ ಆಯ್ಕೆಗಾಗಿ ಪ್ರಸ್ತಾವನೆಯ** ಮನವಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಉಲ್ಲೇಖ ಸಂಖ್ಯೆ: **ಬೆಂಕೇನಪಾ/2026-27/ಎಸ್‌ಇ0169**

ಟೆಂಡರ್ ವೇಳಾಪಟ್ಟಿ: 1) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಟೆಂಡರ್ ದಸ್ತಾವೇಜುನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ದಿನಾಂಕ: **07-05-2026 ರಿಂದ. 2)** ಬಿಡ್ ಪೂರ್ವ ಭಾವಿ ಸಭೆಯ ದಿನಾಂಕ, ಸಮಯ ಮತ್ತು ವಿಳಾಸ: **14-05-2026 ರಂದು ಮಧ್ಯಾಹ್ನ 12.30 ಗಂಟೆಗೆ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ರವರ ಕಛೇರಿ, ಬೆಂಕೇನಪಾ, 9ನೇ ಮಹಡಿ, ಸಾರ್ವಜನಿಕ ಬಹುಪಯೋಗಿ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು - 560001 ಇಲ್ಲಿ ನಡೆಯುವುದು. 3)** ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ವಿಚಾರಣೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **14-05-2026 ರಂದು ಸಂಜೆ 5.00 ಗಂಟೆವರೆಗೆ. 4)** ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **08-06-2026 ರಂದು ಸಂಜೆ 5.00 ಗಂಟೆವರೆಗೆ. 5)** ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ: **09-06-2026 ರಂದು ಸಂಜೆ 5.10 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/-
ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ), ಬೆಂಕೇನಪಾ.